# ಅಂಬೇಡ್ಕರ್ ಕಾಲೋನಿ ಅಭಿವೃದ್ಧಿಯಿಂದ ಮರೀಚಿಕೆ

## ನಿನ್ನೆ ರಾತ್ರಿ ಸುರಿದ ಭಾರಿ ಮಳೆಗೆ ನೀರು ಮನೆಯೊಳಕ್ಕೆ : ಸ್ಥಳೀಯರ ಆಕ್ರೋಶ

● ವಾರ್ತಾಲೋಕ ವಾರ್ತೆ

**ಮರಿಯಮ್ಮನಹಳ್ಳಿ, ಅ.05:** ಹೋಬಳಿಯ ಜಿ.ನಾಗಲಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಗರಗ ಗ್ರಾಮದಲ್ಲಿ ಎಸ್ಸಿ ಕಾಲೋನಿಗಳನ್ನು ಅಭಿವೃದ್ಧಿಯಿಂದ ಕಡೆಗಣಿಸಲಾಗಿದೆ ಹಾಗಾಗಿ ಪ್ರತಿ ಸಲ ಮಳೆಗಾಲ ಬಂದಾಗ ಇದೇ ಪರಿಸ್ಥಿತಿ ಎದುರಿಸುತಿದ್ದೇವೆ. ಈ ಬಗ್ಗೆ ಯಾವೊಬ್ಬ ಅಧಿಕಾರಿಗಳು ಸಹ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ .

ಪ್ರತೀ ವರ್ಷ ಮಳೆ ಶುರುವಾಯಿತು ಎಂದರೆ ನೀರಿನ ಹರಿವು ವಿಪರೀತವಾಗುತ್ತದೆ ಕಾಲೋನಿಗಳಲ್ಲಿ ರಸ್ತೆ, ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆ ಮೇಲೆ ನೀರು ಹರಿದು ಮನೆಯೊಳಗೆ ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ಗರಗ ಗ್ರಾಮದಲ್ಲಿ ಎಸ್ ಸ್ಸಿ ಜನಾಂಗದ 50 ಮನೆಗಳಿರುವ ಅಂಬೇಡ್ಕರ್



ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಚರಂಡಿ ಕಳೆದ 10ವರ್ಷಗಳಿಂದ ಮಾಡಿಸದೆ ಇರುವುದರಿಂದ ಪ್ರತೀ ವರ್ಷ ಇಂತಹ ಅನಾಹುತಗಳು ಮರುಕಳಿಸುತ್ತಿವೆ. ಸ್ಥಳಿಯರು ಅಧಿಕಾರಿಗಳಿಗೆ ಹಲವು ಬಾರಿ ಮೌಕಿಕವಾಗಿ, ಪತ್ರದ ಮುಖಾಂತರ ಮನವಿ ಮಾಡಿದರೂ ಮಾಡಿಸುತ್ತೇವೆಂದು ಹೇಳಿ ನಿರ್ಲಕ್ಷ್ಯ ವಹಿಸಿದ್ದಾರೆ. ಜನಪ್ರತಿನಿಧಿಗಳೂ ಇತ್ತ ಗಮನ ಹರಿಸುತ್ತಿಲ್ಲ. ಚುನಾವಣೆಗಳು ಬಂದಾಗ ಮಾತ್ರ ನಾವು ನೆನೆಪಾಗುತ್ತೇವೆ. ಈ ಭಾರಿ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ ಕೈ ಕಾಲು ಮುಗಿದು ಓಟು ಹಾಕಿಸಿಕೊಳ್ಳುತ್ತಾರೆ. ನಂತರ ನಮ್ಮ ಗೋಳು ಕೇಳೋರಿರುವುದಿಲ್ಲ, ಈ ಕಡೆ ಇಣಿಕಿಯೂ ನೋಡೋದಿಲ್ಲ. ಇದೇ ರೀತಿ ನಿರ್ಲಕ್ಷ್ಯ ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ಅಧಿಕಾರಿಗಳ ವಿರುದ್ಧ ಹೊರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸ್ಥಳಿಯರು ಪತ್ರಿಕೆಗೆ ತಿಳಿಸಿದರು. ಇನ್ನು ಮುಂದೆಯಾದರು ಅಧಿಕಾರಿಗಳು ಈ ಕಡೆ ಗಮನ ಹರಿಸಿ ಅಭಿವೃದ್ಧಿಗೆ ಮುಂದಾಗಬೇಕೆಂದರು.

> ನಿನ್ನೆ ರಾತ್ರಿ ನಾವು ಮಲಗಿದ ಸಮಯದಲ್ಲಿ ವಿಪರೀತ ಮಳೆ ಬಂದಿದೆ. ಚರಂಡಿ, ರಸ್ತೆ ಇಲ್ಲದ ಕಾರಣ ನೀರು ಮನೆ ಒಳಗೆ ನುಗ್ಗಿದ್ದರಿಂದ ರಾತ್ರಿಯೆಲ್ಲಾ ನಾವು ನಿದ್ದೆ ಮಾಡಿಲ್ಲ. ಅಧಿಕಾರಿಗಳು ನಮ್ಮ ಕೇರಿಯನ್ನು ಗಮನದಲ್ಲಿಟ್ಟುಕೊಂಡು ಮೂಲಭೂತ ಸೌಕರ್ಯಗಳನ್ನು ಕೊಡಬೇಕು.
> ತಳವಾರ ಹನುಮಂತಪ್ಪ, ಮನೆ ಮಾಲಿಕ
>
> ಪಂಚಾಯಿತಿಗೆ ಈ ಬಗ್ಗೆ ಮನವಿ ಪತ್ರ ಸಲ್ಲಿಸಿದ್ದೇವೆ, ಅಧಿಕಾರಿಗಳಿಂದ ಯಾವುದೇ ರೀತಿಯ ಸ್ಪಂದನೆ ಬಂದಿರುವುದಿಲ್ಲ. ಎಸ್ಸಿ ಕಾಲೋನಿಗಳೆಂದರೆ ಅಧಿಕಾರಿಗಳಿಗೆ ಅದೇಕೋ ನಿರ್ಲಕ್ಷ್ಯ ಗೊತ್ತಿಲ್ಲ ಇದೇ ರೀತಿ ಮುಂದಿನ ದಿನಗಳಲ್ಲಿ ನಿರ್ಲಕ್ಷಿಸಿದರೆ ಕಾನೂನಿನ ಮೊರೆ ಹೋಗಬೇಕಾಗುತ್ತದೆ.– ಪ್ರಭು ತಳವಾರ್ ಗರಗ ಗ್ರಾಮ, ಜಾಂಬವ ಯುವಸೇನೆ, ಹೋಬಳಿ ಘಟಕದ ಕೋಶಧ್ಯಕ್ಷ.
>
> **ವರದಿ ಲಕ್ಕಿಮರದ. ಮಂಜುನಾಥ**

# ಸತ್ತ ಹಂದಿಗಳ ವಾಸನೆ ಸೋಪ್ಪಿನ ಕಾಳಮ್ಮ ಬಡಾವಣೆ

● ವಾರ್ತಾಲೋಕ ವಾರ್ತೆ

**ಹಡಗಲಿ: ಅ5.** ಹೂವಿನಹಡಗಲಿ ಪಟ್ಟಣದ ಸೋಪ್ಪಿನ ಕಾಳಮ್ಮ ಬಡಾವಣೆ ಹತ್ತನೇ ವಾರ್ಡ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಇರುವ ಜೈನರ ಮಂಜುನಾಥ ರವರ ಜಾಗದಲ್ಲಿ ಹಂದಿಗಳು ಸುತ್ತು ಇಡಿ ವಾರ್ಡ್ ನಲ್ಲಿ ಕೆಟ್ಟ ವಾಸನೆ ಹರಡಿದೆ ಹಾಗೂ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಹಾಗೂ ಸೋಪ್ಪಿನ ಕಾಳಮ್ಮ ಹೈಸ್ಕೂಲ್ ಕಾಲೇಜ್ ವಿದ್ಯಾರ್ಥಿಗಳಿಗೆ ಈ ಕೆಟ್ಟ ವಾಸನೆಯಿಂದ ಕಿರಿ ಕಿರಿ ಅನುಭವಿಸುವಂತಾಗಿದೆ ಎಂದು ಬಡಾವಣೆಯ ನಿವಾಸಿಗಳಾದ ಪರಮೇಶಪ್ಪ. ಗುರುಶಾಂತಯ್ಯ. ಕೋಟ್ರಪ್ಪ.ಟಿ.ಪರಮೇಶ್ವರಪ್ಪ. ಮಂಜಮ್ಮ. ಶಕುಂತಲಮ್ಮ. ಯಶೋದಮ್ಮ. ಇನ್ನುಅನೇಕ ಸಾರ್ವಜನಿಕರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.ಹಾಗೆಯೆ ಹಲವಾರು ಬಾರಿ ಪುರಸಭೆ ಅಧಿಕಾರಿಗಳಿಗೆ. ಸ್ದಳಿಯ ಜನಪ್ರತಿನಿಧಿಗಳಿಗೆ. ಸ್ಥಳಿಯ ಶಾಸಕರಾದ.ಕೃಷ್ಣನಾಯ್ಕ ರವರ ಗಮನಕ್ಕೆ ತಂದರು ಏನು





ಪ್ರಯೋಜನ ವಾಗಿಲ್ಲ.ಸದರಿ ಜಾಗದಲ್ಲಿ ಹಂದಿಗಳು ಸತ್ತು.ಸಾರ್ವಜನಿಕರು. ಅಲ್ಲಿಯೆ ಬಹಿರ್ದೆಸೆಗೆ ಹೋಗುವುದರಿಂದ.ನಮಗೆ ತುಂಬಾ ವಾಸನೆ ಹರಡುತ್ತಿರುವುಧರಿಂದ ಅಲ್ಲಿ ನಮ್ಮ ಜೀವನ ಮಾಡಲು ತುಂಬಾ ಕಷ್ಟಕರವಾಗಿದೆ ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಜಾಗದ ಮಾಲಿಕರು ಸ್ವಂಚ ಮಾಡಿಸಿ ವಾಸನೆ ತಪ್ಪಿಸಲು ಮನವಿ ಮಾಡಿದ್ದಾರೆ.ಒಂದು ವೇಳೆ ಸ್ವಂಚ ಮಾಡದೆ ಹೋದರೆ ಮುಂದಿನ ದಿನಗಳಲ್ಲಿ ಇಲಾಖೆಯ ಮುಂದೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುದೇಂದು. ವಾರ್ಡಿನ ನಿವಾಸಿಗಳು ಪತ್ರಿಕೆ ಪ್ರಕರಣೆ ಮಾಡಿದ್ದಾರೆ.

**ವರದಿ ಹಲಗಿ ಸುರೇಶ್.**

# ಸಿಎಂ ಸಿದ್ಧರಾಮಯ್ಯರವರು ರಾಜೀನಾಮೆ ಏಕೆ ಕೊಡಬೇಕು ? ಅವರ ರಾಜೀನಾಮೆ ಅವಶ್ಯಕತೆ ಕರ್ನಾಟಕ ರಾಜ್ಯದ ಜನತೆಗೆ ಇಲ್ಲ. ಪರಶುರಾಮ್ ಕೆರೆಹಳ್ಳಿ

● ವಾರ್ತಾಲೋಕ ವಾರ್ತೆ

**ಕೊಪ್ಪಳ: ಅ5.** ಮಾನ್ಯ ಸಿದ್ದರಾಮಯ್ಯನವರ ಮೇಲೆ ವಿನಾಕಾರಣ ಬಿಜೆಪಿ ದ್ವೇಷದ ರಾಜಕಾರಣ ಮಾಡಿ ಸರಿಯಾಗಿ ಸರ್ಕಾರದಲ್ಲಿ ಆಡಳಿತ ಮಾಡುವುದಕ್ಕೆ ಬಿಡದೆ ತೊಂದರೆಯನ್ನು ಕೊಡುತ್ತದೆ. ಇದು ಖಂಡನಿಯ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಮಾಧ್ಯಮ ವಕ್ತಾರ ಪರಶುರಾಮ ಕೆರೆಹಳ್ಳಿ.

ಈ ರಾಜ್ಯದ ಸಮಸ್ತ ನಾಗರಿಕರಿಗೆ ಮತ್ತು ಎಲ್ಲಾ ಮಹಿಳೆಯರಿಗೆ 5 ಗ್ಯಾರಂಟಿ ಯೋಜನೆಗಳ ನೀಡಿದ ಗ್ಯಾರಂಟಿ ರಾಮಯ್ಯ, ಅನ್ನ ಭಾಗ್ಯವನ್ನು ಕೊಟ್ಟು,ಬಡವರ ಹಸಿವನ್ನು ನೀಗಿಸಿದ ಅನ್ನ ರಾಮಯ್ಯ, ಬಡವರ ಬಂಧು ದೀನದಲಿತರ ನಾಯಕ, ದಲಿತರ,ಹಿಂದುಳಿದ, ಅಲ್ಪಸಂಖ್ಯಾತರ ಅಹಿಂದ ನಾಯಕರಾದ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ರಾಜೀನಾಮೆ



ಕೊಡುವುದು ಬೇಡ ಮತ್ತು ಅದರ ಅವಶ್ಯಕತೆ ಇಲ್ಲ ಎಂದು ರಾಜ್ಯದ ಜನತೆ ಈಗಾಗಲೇ ಕಂಬನಿ ಮಿಡಿದಿದ್ದಾರೆ, ಹಾಗೂ ರಾಜ್ಯದ ಕಾಂಗ್ರೆಸ್ಸಿನ ಎಲ್ಲಾ ನಾಯಕರುಗಳು 136 ಶಾಸಕರುಗಳು, ಮಾನ್ಯ ಶ್ರೀ ಸಿದ್ದರಾಮಯ್ಯನವರಿಗೆ ಬೆಂಬಲವಾಗಿ ನಿಂತಿದ್ದಾರೆ.ರಾಜ್ಯದ ಜನತೆ ಯಾವ ಕಾರಣಕ್ಕೂ ರಾಜೀನಾಮೆ ಕೊಡಬೇಡಿ ಎಂದು ಒತ್ತಾಯಿಸಿದ್ದಾರೆ.

ಕೇಂದ್ರದ ಸರ್ಕಾರದ ಓಆಂ ಸಚಿವರಾದ ಮಾನ್ಯ ಶ್ರೀ ಕುಮಾರಸ್ವಾಮಿ ಅವರು ಯಾವಾಗ ರಾಜೀನಾಮೆ ಕೊಡುತ್ತಾರೆ ?ಕುಮಾರಸ್ವಾಮಿ ಅವರ ಮೇಲೆಯೂ ಈಖಖ ಆಗ ಬೇಕೆದೆ, ಕಾರಣ ಡಿನೋಟಿಫಿಕೇಷನ್ ಮಾಡಿ ಸರ್ಕಾರದ ಆಸ್ತಿಯನ್ನು ಕಬಳಿಸಿದ್ದಾರೆ, ತಮ್ಮ ಕುಟುಂಬದ ಸದಸ್ಯರಿಗೆ ಸರ್ಕಾರದ ಜಮೀನನ್ನು ಬೇನಾಮಿ ಆಸ್ತಿಯನ್ನು ತೆಗೆದುಕೊಂಡಿದ್ದಾರೆ.

ಮೋದಿಜಿ ರವರು ಚುನಾವಣೆಯ ಬಾಂಡುಗಳನ್ನು ಮೋದಿ ಸರ್ಕಾರ ಕದ್ದಿದ್ದಾರೆ. ಅಂತರಾಷ್ಟ್ರೀಯ ರಸ್ತೆಯ ಬ್ರಿಡ್ಜ್ ಗಳನ್ನು ಮಾಡಿ, ಅಂತಹ ರಸ್ತೆ ಬ್ರಿಡ್ಜ್ ಗಳ ಅನುದಾನವೆಲ್ಲ ಬಿಜೆಪಿ ಸರ್ಕಾರ ಕಬಳಿಸಿದ್ದಾರೆ. ಆದ ಕಾರಣ ದೇಶದ ಪ್ರಧಾನಮಂತ್ರಿಯಾದ ನರೇಂದ್ರ ಮೋದಿಜಿ ಅವರು ರಾಜೀನಾಮೆ ಯಾವಾಗ ಕೊಡುತ್ತಾರೆ? ಮತ್ತು ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಜೀನಾಮೆ ಯಾವಾಗ ? ಇವರ ಮೇಲೆ ಈಖಖ ಆಗ್ಬೇಕು ಮತ್ತು ಚುನಾವಣೆ ಬಾಂಡುಗಳನ್ನು ಸುಲಿಗೆ ಮಾಡಿದ್ದಾರೆ. ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ಎಸ್ ವಿಜಯೇಂದ್ರ ಅವರು ಬಿಜೆಪಿ ಸರ್ಕಾರ ಅವಧಿಯಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆದಾಗ ಚೆಕ್ಕುಗುಳು ಮುಖಾಂತರ ಭ್ರಷ್ಟಾಚಾರ ಮಾಡುತ್ತಿದ್ದರು, ಇವರ ಮೇಲು ಈಖಖ ಆಗಬೇಕಾಗಿದೆ. ಕೇಂದ್ರದ ಓಆಂ ಸಂಸದರಾದ ಡಾ ಸುಧಾಕರ್ ಅವರು ರಾಜೀನಾಮೆ ಕೊಡಬೇಕು.

ಇವರು ಕೋವಿಡ್ ಹಗರಣದಲ್ಲಿ ಭಾಗಿಯಾಗಿದ್ದಾರೆ. ಈಗಾಗಲೇ ತನಿಖೆ ಪ್ರಾರಂಭವಾಗಿದೆ.

21 ಹಗರಣಗಳಲ್ಲಿ ಬಿಜೆಪಿ ನಾಯಕರುಗಳ ಮೇಲೆ ತನಿಖೆ ನಡೆಯಬೇಕಾಗಿದೆ. ಎಂದು ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷರಾದ ಗಾಳೆಪ್ಪ ಎಚ್ ಪೂಜಾರ್ ರವರು ಹಾಗೂ ಕೊಪ್ಪಳ ಜಿಲ್ಲಾ ಪರಿಶಿಷ್ಟ ಜಾತಿ ವಿಭಾಗದ ವತಿಯಿಂದ ಪತ್ರಿಕ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

**ವರದಿ ಅಬ್ದುಲ್ ವಾಹಿದ್.**

# ಹಿರಿಯ ನಾಗರಿಕರ ಆರೋಗ್ಯ ಕಾಳಜಿ ವಹಿಸಿ

**ಬಾಗಲಕೋಟೆ:** ಹಿರಿಯ ನಾಗರಿಕರಿಗಾಗಿ ಇಂಥ ಒಂದು ಕ್ಲಿನಿಕ್ ಆರಂಭಿಸುವುದು ಬಿವಿವಿ ಸಂಘದ ಆಶಯವಾಗಿತ್ತು, ಇಂದು ಸಾಕಾರಗೊಂಡಿದೆ. ಹಿರಿಯರ ಆರೋಗ್ಯ ಕಾಳಜಿ ವಹಿಸುವುದು ಎಲ್ಲರ ಕರ್ತವ್ಯ ಎಂದು ಎಸ್.ಎನ್. ಮೆಡಿಕಲ್ ಕಾಲೇಜ್ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಹೇಳಿದರು.

ನಗರದ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ ಮಂಗಳವಾರ ಹಿರಿಯ ನಾಗ–ರಿಕರ ಕ್ಲಿನಿಕ್ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ವೃದ್ಧರು ಇಂದಿನ ಯುವ ಪೀಳಿಗೆಯೊಂದಿಗೆ ತಮ್ಮ ಜೀವನಶೈಲಿ ಬದಲಿಸಿಕೊಂಡು ಹೋಗುವುದನ್ನು ರೂಢಿಸಿಕೊಳ್ಳಬೇಕು. ನಿವೃತ್ತಿ ಪೂರ್ವದಲ್ಲಿನ ದುಡಿಮೆಯ ಅಲ್ಪ ಭಾಗವನ್ನು ವೃದ್ಧರು ತಮ್ಮ ಜೊತೆಗಿಟ್ಟುಕೊಂಡರೆ ವೃದ್ಧಾಪ್ಯ ಜೀವನವನ್ನು



ಸಂತೋಷಮಯವಾಗಿ ಕಳೆಯಬಹುದು ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಹಿರಿಯ ನಾಗರಿಕರಾದ ಡಾ. ಎ.ಬಿ.ಚೌಧರಿ, ಡಾ.ಶಿವಾಜಿರಾವ್ ಬ್ರಿಡ್, ಜಯಣ್ಣ ಮತ್ತು ತಿಪ್ಪವ್ವ ಅವರುಗಳನ್ನು ಸನ್ಮಾನಿಸಲಾಯಿತು. ಕುಮಾರೇಶ್ವರ ಆಸ್ಪತ್ರೆಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ.ಗೋಪಾಲ ಬಜಾಜ, ಡಾ.ನವೀನ ವೀ ಚರಂತಿಮಠ, ಡಾ. ಅಶೋಕ ಡೋರ್ಲೆ, ಡಾ.ನಾರಾಯಣ ಮುತಾಲಿಕ ಇದ್ದರು.

# ವಿಜೃಂಭಣೆಯಿಂದ ಜರುಗಿದ ಕರ್ನಾಟಕ ಸಂಭ್ರಮ 50 ಆಚರಣೆ:ಗಡಿನಾಡ ಚೇತನರಿಗೆ ಪ್ರಶಸ್ತಿ ಪ್ರದಾನ



**ವಿಜಯಪುರ, :** ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಜಯಪುರ ಜಿಲ್ಲಾಡಳಿತದ ಸಹಯೋಗದಲ್ಲಿ ಮಹಾರಾಷ್ಟ್ರ ರಾಜ್ಯದ ಸಾಂಗಲಿ ಜಿಲ್ಲೆ, ಜತ್ತ ತಾಲ್ಲೂಕಿನ ಗುಡ್ಡಾಪುರ ಶ್ರೀ ದಾನಮ್ಮ ದೇವಿ ಸುಕ್ಷೇತ್ರದಲ್ಲಿ ಸೆ. 30 ರಂದು ಕರ್ನಾಟಕ ಸಂಭ್ರಮ–50'ರ ಆಚರಣೆಯ ಜೊತೆಯಲ್ಲಿ ಡಾ. ಜಯದೇವಿ ತಾಯಿ ಲಿಗಾಡೆ" "ನಾಡೋಜ ಡಾ. ಕಯ್ಯಾರ ಕಿಂಞ್ಞಣ್ಣ ರೈ ಮತ್ತು "ಡಾ. ಚನ್ನಬಸವ ಪಟ್ಟದ್ದೇವರು ಇವರ ಹೆಸರಿನಲ್ಲಿ ಗಡಿ ಪ್ರಾಧಿಕಾರದಿಂದ ನೀಡುತ್ತಿರುವ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಹೊರನಾಡ ಗಡಿ ಕನ್ನಡಿಗರ ಸಮಾವೇಶ ನಡೆಯಿತು.

ಬರಗೂರು ರಾಮಚಂದ್ರಪ್ಪ ಅವರ ಸಮಿತಿ ಆಯ್ಕೆ ಮಾಡಿರುವ ಗಡಿನಾಡ ಚೇತನ ಪ್ರಶಸ್ತಿ ಪ್ರದಾನ ಮಾಡಲಾಯಿತು.

2023–24ನೇ ಸಾಲಿಗೆ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಗಡಿನಾಡಿನ ಚೇತನ ಪ್ರಶಸ್ತಿಗೆ ಕಾಸರಗೋಡಿನ ರಾಧಾಕೃಷ್ಣ ಕೆ. ಉಳಿಯತ್ತಡ, ಡಾ. ಜಯದೇವಿ ತಾಯಿ ಲಿಗಾಡೆ ಗಡಿನಾಡ ಚೇತನ ಪ್ರಶಸ್ತಿಗೆ ಬೀದರದ ಪಂಚಾಕ್ಷರಿ ಪುಣ್ಯ ಶೆಟ್ಟಿ, ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ ಗಡಿನಾಡ ಚೇತನ ಪ್ರಶಸ್ತಿಯನ್ನು

ಬೆಳಗಾವಿಯ ಬಿ.ಎಸ್. ಗವಿಮಠ ಹಾಗೂ 2024–25ನೇ ಸಾಲಿನ ಡಾ. ಚನ್ನಬಸವ ಪಟ್ಟದ್ದೇವರು ಗಡಿನಾಡ ಚೇತನ ಪ್ರಶಸ್ತಿಯನ್ನು ಗುಜರಾತಿನ ಅಹ್ಮದಾಬಾದ್‌ನ ಕರ್ನಾಟಕ ಸಂಘ,ಜಯದೇವಿ ತಾಯಿ ಲಿಗಾಡೆ ಗಡಿನಾಡಿನ ಚೇತನ ಪ್ರಶಸ್ತಿಯನ್ನು ಮಹಾರಾಷ್ಟ್ರ ರಾಜ್ಯದ ಸಂಖದ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ ಹಾಗೂ ಉಮದಿಯ ಸರ್ವೋದಯ ಶಿಕ್ಷಣ ಸಂಸ್ಥೆಯನ್ನು, ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ ಗಡಿನಾಡ ಚೇತನ ಪ್ರಶಸ್ತಿಯನ್ನಹ ಕೇರಳ ರಾಜ್ಯದ ಕಾಸರಗೋಡಿನ ಪೆರಡಾಲ ನೀರ್ಚಾಲು, ಕುಂಬಳೆ (ದಾರಿ) ಮಹಾಜನ ವಿದ್ಯಾಭಿವರ್ಧಕ ಸಂಘಕ್ಕೆ ಗಡಿನಾಡ ಚೇತನ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿಯು ಹಲ್ಮಿಡಿ ಶಾಸನದ ಮಾದರಿಯ ಸ್ಮರಣಿಕೆ, ಪ್ರಮಾಣ ಪತ್ರ ಹಾಗೂ ಒಂದು ಲಕ್ಷ ರೂ. ನಗದು ಒಳಗೊಂಡಿದೆ.

ಇದಕ್ಕೂ ಮೊದಲು ಗುಡ್ಡಾಪುರ ದಾನಮ್ಮದೇವಿ ದೇವಸ್ಥಾನದಿಂದ ವೇದಿಕೆಯವರೆಗೆ ಡೊಳ್ಳು ಕುಣಿತ, ಕರಡಿ ಮಜಲು, ವೀರಗಾಸೆ, ತಾಸೆ ವಾದನ, ಜಗ್ಗಲಗಿ, ನಂದಿ ಕೋಲು, ಹಾಲಕ್ಕಿ ಸುಗ್ಗಿ ಕುಣಿತ, ಸತ್ತಿಗೆ ಕುಣಿತ, ಗೊಂಬೆ ಕುಣಿತದ ವಿವಿಧ ಜಾನಪದ ಕಲಾ ತಂಡಗಳಿಂದ ಮೆರವಣಿಗೆ ನಡೆಯಿತು.

ಮಹಾರಾಷ್ಟ್ರ ರಾಜ್ಯದ ಕನ್ನಡ ಶಾಲೆಗಳಿಗೆ ಕನ್ನಡ ಭಾ?ಯ 'ನಲಿ–ಕಲಿ' ಕಲಿಕಾ ಸಾಮಗ್ರಿಗಳು ವಿತರಣೆ ಮಾಡಲಾಯಿತು.

ಸಮಾರಂಭದಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ "ಲಾಂಛನ" ಸಾಕ್ಷ್ಯ ಚಿತ್ರ ಹಾಗೂ ಪ್ರಶಸ್ತಿ ಪುರಸ್ಕೃತರ ಪರಿಚಯಾತ್ಮಕ ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

# ಬಂಜಾರಾ ಶ್ರೀಮಂತ ಸಂಸ್ಕೃತಿ: ದರ್ಶನಾ




**ವಿಜಯಪುರ :** ಬಂಜಾರಾ ಸಮುದಾಯದ ಸಂಸ್ಕೃತಿ ಅತ್ಯಂತ ಶ್ರೀಮಂತ ಸಂಸ್ಕೃತಿಯಾಗಿದ್ದು, ಸದ್ಯ ಈ ಸಮಾಜದ ಉಡುಪುಗಳಿಗೆ ಜಗತ್ತಿನಾದ್ಯಂತ ಉತ್ತಮ ಬೇಡಿಕೆ ಇದೆ. ಬಂಜಾರಾ ಸಮುದಾಯದ ಮಹಿಳೆಯರು ಕರಕುಶಲ ಕೌಶಲದಲ್ಲಿ ಪರಿಣಿತಿ ಸಾಧಿಸಿರುತ್ತಾರೆ ಎಂದು ಧಾರವಾಡದ ಕರಕುಶಲ ಸೇವಾ ಕೇಂದ್ರದ ಅಧಿಕಾರಿ ದರ್ಶನಾ ಹೇಳಿದರು.

ವಿಜಯಪುರ ತಾಲ್ಲೂಕಿನ ಮಖಣಾಪುರ ಎಲ್.ಟಿ 01 ತಾಂಡಾದಲ್ಲಿ ಕೇಂದ್ರ ಸರ್ಕಾರದ ಜವಳಿ ಸಚಿವಾಲಯ, ಕರಕುಶಲ ಸೇವಾ ಕೇಂದ್ರ ಧಾರವಾಡ, ಆಲ್ ಇಂಡಿಯಾ ಬಂಜಾರಾ ಸೇವಾ ಸಂಘ ವಿಜಯಪುರ ಸಹಯೋಗದಲ್ಲಿ ಶನಿವಾರ ನಡೆದ 60 ದಿನ ಕಸೂತಿ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣಪತ್ರ ವಿತರಣೆ ಹಾಗೂ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಳ್ಳಿಯ ಮಹಿಳೆಯರು ಕೇವಲ ಮನೆ, ಹೊಲದ ಕೆಲಸಕ್ಕೆ ಸೀಮಿತರಾಗದೆ, ಸರ್ಕಾರದಿಂದ ಬರುವ ಯೋಜನೆಗಳ ಸದುಪಯೋಗ ಪಡೆದುಕೊಂಡು ಉನ್ನತ ಸ್ಥಾನಕ್ಕೆ ಏರಲು ಪ್ರಯತ್ನಿಸಬೇಕು. ಸರ್ಕಾರದ ತರಬೇತಿ ಯೋಜನೆಗಳನ್ನು ಪಡೆದು ತಮ್ಮ ಕೌಶಲ ಹೆಚ್ಚಿಸಿಕೊಳ್ಳುವ ಮೂಲಕ ಸದೃಢರಾಗಬೇಕು ಎಂದು ಸಲಹೆ ನೀಡಿದರು.

ಸದ?ಯ ತರಬೇತಿಯಲ್ಲಿ 30 ಮಹಿಳೆಯರು ಸಕ್ರಿಯರಾಗಿ ಕಸೂತಿ ತರಬೇತಿ ಪಡೆದುಕೊಂಡಿದ್ದು, ತರಬೇತಿ ಸಂದರ್ಭದಲ್ಲಿ ನೀಡಿರುವ ಗೌರವಧನವನ್ನು ಉತ್ತಮ ಕೆಲಸಕ್ಕೆ ವಿನಿಯೋಗಿಸಿಕೊಳ್ಳಬೇಕು.

ತರಬೇತಿಗೆ ಹಾಜರಾದ ಕೆಲ ಮಹಿಳೆಯ–ರಿಗೆ ಹೊಲಿಗೆ ಯಂತ್ರಗಳನ್ನು ಇಲಾಖೆಯಿಂದ ಮುಂದಿನ ದಿನಗಳಲ್ಲಿ ನೀಡಲಾಗುವುದು ಎಂದರು.

ಆಲ್ ಇಂಡಿಯಾ ಬಂಜಾರಾ ಸೇವೆ ಸಂಘದ ಯುವ ಘಟಕದ ಜಿಲ್ಲಾಧ್ಯಕ್ಷ ರವಿ ಲಮಾಣಿ ಮಾತನಾಡಿ, ಕರ ಕುಶಲ ತರಬೇತಿ ಪಡೆದ ಮಹಿಳೆಯರು ತಮ್ಮದೇಯಾದ ಒಂದು ಗುಂಪು ಮಾಡಿ ಬಂಜಾರಾ ಕಸೂತಿಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಮೂಲಕ ಉದ್ಯಮ ಪ್ರಾರಂಭಿಸಬೇಕು, ಕೇಂದ್ರ ಸರ್ಕಾರದಿಂದ ಮುದ್ರಾ ಯೋಜನೆಯ ಸಹಾಯ ಕೂಡ ಇದಕ್ಕೆ ದೊರೆಯಲಿದೆ ಎಂದು ಸಲಹೆ ನೀಡಿದರು.

ಬಂಜಾರಾ ಸಮುದಾಯ ಹಿಂದುಳಿದ ಸಮಾಜ ಎನ್ನುವ ಹಣೆಪಟ್ಟಿ ಕಳಚಿ ಹಾಕಲು ಮಹಿಳೆಯರು ಮುಂದಾಗಬೇಕು. ಬಂಜಾರಾ ಸಂಸ್ಕೃತಿಯ ಶ್ರೀಮಂತಿಕೆ ಪ್ರತೀಕವಾದ ಬಂಜಾರಾ ಕಸೂತಿ ಉಡುಪುಗಳು ಎಲ್ಲೆಡೆ ಖ್ಯಾತಿ ಪಡೆಯುವಂತಾಗಬೇಕು ಎಂದರು.

ಆಲ್ ಇಂಡಿಯಾ ಬಂಜಾರಾ ಸೇವಾ ಸಂಘದ ಬಾಬು ಪವಾರ, ಶಾರದಾ ಲಮಾಣಿ, ಸುನೀಲ, ತರಬೇತಿದಾರ ಜಯಶ್ರೀ ಲಮಾಣಿ, ಕರಕುಶಲ ಸೇವಾ ಕೇಂದ್ರದ ಸಹಾಯಕ ಅಧಿಕಾರಿ ಖು?ಮಿಸ್, ಸೇವು ಗೋಪು ಲಮಾಣಿ, ಲೋಕು ಚಹ್ವಾಣ, ಪರಶುರಾಮ ಪವಾರ, ವಾಲು ಪೂಜಾರಿ, ಗಣಪತಿ ಪೂಜಾರಿ ಇದ್ದರು.

# ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಕ್ರೀಡಾಕೂಟ: ಶಾಂತಿನಿಕೇತನ ಶಾಲೆ ವಲಯ ಮಟ್ಟಕ್ಕೆ ಆಯ್ಕೆ

**ವಿಜಯಪುರ :** ಜಿಲ್ಲಾ ಪಂಚಾಯತಿ, ವಿಜಯಪುರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ವಿಜಯಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ನಗರ ವಲಯ ಇವರ ಸಹಯೋಗದಲ್ಲಿ 2024–25ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಬಾಲಕ, ಬಾಲಕಿಯರ ಜಿಲ್ಲಾ ಮಟ್ಟದ ಬ್ಯಾಂಡ್ಮಿಂಟನ್ ಕ್ರೀಡಾಕೂಟದಲ್ಲಿ ನಗರದ ಶಾಂತಿನಿಕೇತನ ಪ್ರಾಥ–ಮಿಕ ಮತ್ತು ಪ್ರೌಢಶಾಲಾ ಮಕ್ಕಳು ವಿಶಿಷ್ಟ ಸಾಧನೆಯನ್ನು ಮಾಡಿ ವಲಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



14 ವರ್ಷ ವಯೋಮಾನದ ಬಾಲಕಿಯರ ಬ್ಯಾಂಡ್ಮಿಂಟನ್ ವಿಭಾಗದಲ್ಲಿ ವೈಭವಿ ಹುಟಗಿ, ಸ್ನೇಹಶ್ರೀ ಬಿರಾದಾರ, ತನ್ವಿ ಭೋಸಲೆ, ಸೃಷ್ಟಿ ಸೋನಿ ಪ್ರಥಮ ಸ್ಥಾನವನ್ನು, 17 ವರ್ಷದ ವಯೋಮಾನದ ಒಳಗಿನ ಬಾಲಕಿಯರ ಬ್ಯಾಂಡ್ಮಿಂಟನ್ ವಿಭಾಗದಲ್ಲಿ ವೈಷ್ಣವಿ ಚೌಧರಿ, ಲಕ್ಷ್ಮಿ ಉತ್ನಾಳ, ಆಧ್ಯಾ ನಾವಿ, ಸಹನಾ ತುಪ್ಪದ, ಅನನ್ಯ ಆಲೂರ ಪ್ರಥಮ ಸ್ಥಾನವನ್ನು ಹಾಗೂ 14 ವರ್ಷದ ವಯೋಮಾನದ ಒಳಗಿನ ಬಾಲಕರ ಬ್ಯಾಡ್ಮಿಂಟನ್ ವಿಭಾಗದಲ್ಲಿ ಆಯಾನ್ ಹುಲ್ಲೂರ, ಸಮರ್ಥ ಕಲ್ಮಡಿ, ಪ್ರಜ್ವಲ ಚವ್ಹಾಣ, ಅಖಿಲೇಷ ಸೂರ್ಯವಂಶಿ, ಜಯ ಪಾಟಿ–ದಾರ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ಈ ಕ್ರೀಡಾಕೂಟದಲ್ಲಿ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷೆ ಶೀಲಾ ಬಿರಾದಾರ, ಚೇರಮನ್ ಡಾ. ಸುರೇಶ ಬಿರಾದಾರ, ನಿರ್ದೇಶಕಿ ದಿವ್ಯಾ ಬಿರಾದಾರ, ಪ್ರಾಚಾಯರ್ು ಶ್ರೀಧರ ಕುರಬೇಟ, ದೈಹಿಕ ಶಿಕ್ಷಕರಾದ ಎ.ಎಚ್. ಸಗರ, ಕಿರಣ ರಾಠೋಡ, ಪ್ರವೀಣ ಗೆಣ್ಣೂರ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# ವಸತಿ ರಹಿತರಿಗೆ ಮನೆ ಕಟ್ಟಲು ಅನುದಾನ ಬಿಡುಗಡೆ: ಶಾಸಕ ಸುನೀಲಗೌಡ ಪಾಟೀಲ

**ವಿಜಯಪುರ, ;** ಜಿಲ್ಲೆಯ ಎಲ್ಲ 13 ತಾಲೂಕುಗಳ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಪ್ರಧಾನಮಂತ್ರಿ ಆವಾಸ ಯೋಜನೆಯಡಿ 2024–25ನೇ ಆರ್ಥಿಕ ವರ್ಷದಲ್ಲಿ ವಸತಿರಹಿತರಿಗೆ ಮನೆ ಕಟ್ಟಲು ಸರಕಾರದಿಂದ ಅನುದಾನ ಬಿಡುಗಡೆಯಾಗಿದೆ. ಆದ್ದರಿಂದ ಕೂಡಲೇ ಈ ಮನೆಗಳ ಜಿ.ಪಿ. ಎಸ್ ಮಾಡಿ, ಫಲಾನುಭವಿಗಳು ಮನೆ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡಲು ಪಂಚಾಯತಿ ಅಭಿವೃದ್ಧಿ ಅಧಿಕಾರಿ(ಪಿ.ಡಿ.ಓ) ಗಳಿಗೆ ನಿರ್ದೇಶನ ನೀಡುವಂತೆ ವಿಧಾನ ಪರಿಷತ್ ಶಾಸಕ ಸುನೀಲಗೌಡ ಬಿ. ಪಾಟೀಲ ವಿಜಯಪುರ ಜಿಲ್ಲೆಯ ಎಲ್ಲ



ತಾಲೂಕ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ(ಇ.ಓ) ಗಳಿಗೆ ಪತ್ರ ಬರೆದಿದ್ದಾರೆ.

ಈ ಎಲ್ಲ ಮನೆಗಳ ನಿರ್ಮಾಣ–ಕ್ಕೆ ಸರಕಾರ ಎಸ್.ಸಿ ಫಲಾನುಭವಿಗಳಿಗೆ ರೂ. 43,750 ಮತ್ತು ಇತರೆ ಫಲಾನುಭವಿಗಳಿಗೆ ರೂ. 30,000 ಅನುದಾನವನ್ನು ಫಲಾನುಭವಿಗಳಿಗೆ ಖಾತೆಗಳಿಗೆ ನೇರವಾಗಿ ಜಮೆ ಮಾಡುತ್ತಿದೆ.

ಜಿಲ್ಲೆಯ ಆಲಮೇಲ ತಾಲೂಕಿನ 13 ಗ್ರಾ. ಪಂ ಗಳಲ್ಲಿ 511, ಬಬಲೇಶ್ವರ ತಾಲೂಕಿನ 16 ಗ್ರಾ. ಪಂ ಗಳಲ್ಲಿ 711, ಬಸವನ ಬಾಗೇವಾಡಿ ತಾಲೂಕಿನ 18 ಗ್ರಾ. ಪಂ ಗಳಲ್ಲಿ 1053, ಚಡಚಣ ತಾಲೂಕಿನ 13 ಗ್ರಾ. ಪಂ ಗಳಲ್ಲಿ 823, ದೇವರ ಹಿಪ್ಪರಗಿ ತಾಲೂಕಿನ 14 ಗ್ರಾ. ಪಂ ಗಳಲ್ಲಿ 840, ಇಂಡಿ ತಾಲೂಕಿನ 39 ಗ್ರಾ. ಪಂ ಗಳಲ್ಲಿ 1486, ಕೊಲ್ಹಾರ ತಾಲೂಕಿನ 10 ಗ್ರಾ. ಪಂ ಗಳಲ್ಲಿ 675, ಮುದ್ದೇಬಿಹಾಳ ತಾಲೂಕಿನ 22 ಗ್ರಾ. ಪಂ ಗಳಲ್ಲಿ 1307, ನಿಡಗುಂದಿ ತಾಲೂಕಿನ 11 ಗ್ರಾ. ಪಂ ಗಳಲ್ಲಿ 207, ಸಿಂದಗಿ ತಾಲೂಕಿನ 18 ಗ್ರಾ. ಪಂ ಗಳಲ್ಲಿ 457, ತಾಳಿಕೋಟೆ ತಾಲೂಕಿನ 14 ಗ್ರಾ. ಪಂ ಗಳಲ್ಲಿ 774, ತಿಕೋಟಾ ತಾಲೂಕಿನ 15 ಗ್ರಾ. ಪಂ ಗಳಲ್ಲಿ 771, ವಿಜಯಪುರ ತಾಲೂಕಿನ 17 ಗ್ರಾ. ಪಂ ಗಳಲ್ಲಿ 770 ಫಲಾನುಭವಿಗಳ ಖಾತೆಗೆ ನೇರವಾಗಿ ಯೋಜನೆಯ ಹಣ ಜಮೆ ಆಗುತ್ತಿದೆ ಎಂದು ತಿಳಿಸಿದ್ದಾರೆ.

ಗ್ರಾ. ಪಂ. ಅಧಿಕಾರಿಗಳು ಈ ನಿಟ್ಟಿನಲ್ಲಿ ಕೂಡಲೇ ಜಿ.ಪಿ. ಎಸ್ ಮಾಡಿಸಿ, ವಸತಿ–ರಹಿತ ಫಲಾನುಭವಿಗಳು ಮನೆ ಕಟ್ಟಿಕೊಳ್ಳುವಂತೆ ಮಾಹಿತಿ ನೀಡಲು ಕ್ರಮ ಕೈಗೊಳ್ಳಬೇಕು. ಅಲ್ಲದೇ, ಜಿ.ಪಿ.ಎಸ್ ಮಾಡಿದ ಪ್ರತಿಯನ್ನು ವಿಧಾನ ಪರಿಷತ್ ಶಾಸಕರ ಕಚೇರಿಗೆ ಸಲ್ಲಿಸುವಂತೆ ಸುನೀಲಗೌಡ ಪಾಟೀಲ ಅವರು ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಕ್ಲಾಸ್ ಅತ್ಯವಶ್ಯ



**ಲೋಕಾಪುರ:** ಆಧುನಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಕ್ಲಾಸ್ ಅತಿ ಅವಶ್ಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.

ಸಮೀಪದ ಚಿಕ್ಕೂರದಲ್ಲಿ ಅಂದಾಜು 3.15 ಕೋಟಿ ರೂ. ವೆಚ್ಚದಲ್ಲಿ ಮುಧೋಳ ತಾಲೂಕಿನ 42 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್‌ಗಳಿಗೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕಿನ 25 ಸರ್ಕಾರಿ ಶಾಲೆಗಳಿಗೆ ಶುದ್ಧ ನೀರಿನ ಘಟಕ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹಂತಹಂತವಾಗಿ ತಾಲೂಕಿನ ಪ್ರತಿಯೊಂದು ಸರ್ಕಾರಿ ಶಾಲೆಗಳಿಗೂ ನೀಡಲಾಗುವುದು. ಶಾಲೆಗಳ ಮೂಲ ಸೌಲಭ್ಯಗಳಾದ ಕುಡಿಯುವ ನೀರು, ಶೌಚಗೃಹ, ಶಾಲೆಯ ಕಟ್ಟಡ ಮತ್ತು ಕಾಂಪೌಂಡ್ ನಿರ್ಮಿಸಲಾಗುವುದು ಎಂದು ತಿಳಿಸಿದರು.

ಸ್ಮಾರ್ಟ್ ಕ್ಲಾಸ್‌ಗಳಿಂದ ಶಿಕ್ಷಕರು ಮತ್ತು ಮಕ್ಕಳ ಮೇಲಿನ ಹೊರೆ ಕಡಿಮೆ ಮಾಡುವುದಲ್ಲದೆ, ಮಕ್ಕಳು ಬಹುಬೇಗ ವಿಷಯ ಗ್ರಹಿಸುತ್ತಾರೆ. ತರಗತಿಯ ಡಿಜಿಟಲ್ ಪರದೆಯತ್ತ ತಮ್ಮ ಮನಸ್ಸನ್ನು ಕೇಂದ್ರೀಕರಿಸುವುದರಿಂದ ಪಠ್ಯದ ವಿಷಯಗಳು ಬೇಗನೆ ಮಕ್ಕಳ ಮನಸ್ಸಿನಲ್ಲಿ ಉಳಿಯುತ್ತವೆ. ಖಾಸಗಿ ಶಾಲೆಗಳಿಗಿಂತಲೂ ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ಸಂಸ್ಕೃತಿ, ಆಚಾರ-ವಿಚಾರಗಳನ್ನು ಶಿಕ್ಷಕರು ಕಲಿಸುತ್ತಿದ್ದಾರೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಮೀರ ಮುಲ್ಲಾ ಮಾತನಾಡಿ,

ಶಿಕ್ಷಣ ರಂಗಕ್ಕೆ ಸಚಿವರು ಹೆಚ್ಚಿನ ಮುತವರ್ಜಿ ವಹಿಸಿದ್ದಾರೆ. ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಕಡಿಮೆ ಮಾಡಿಲ್ಲ. ನಮ್ಮ ತಾಲೂಕಿನ ಸರ್ಕಾರಿ ಶಾಲೆ ಮಕ್ಕಳು ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿ ತಾಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದರು.

ಉದಯ ಸಾರವಾಡ, ಸಂಜಯ ತಳೇವಾಡ, ಕೆ.ಎನ್. ಪರಡ್ಡಿ, ರಾಜುಗೌಡ ನ್ಯಾಮಗೌಡ್ರ, ರಾಜು ಬಾಗವಾನ, ಹೊಳಬಸು ದಂಡಿನ, ವೆಂಕಣ್ಣ ಅಂಕಲಗಿ, ಮಹಾದೇವ ಹೊಸಟ್ಟಿ, ಮಂಜುಗೌಡ ಪಾಟೀಲ, ಯಶವಂತ ಮಾದರ, ಬಸಪ್ಪ ಸೊನ್ನದ, ಮೋಹನ ಸೊನ್ನದ, ಭೀಮಶಿ ಅರಳಿಕಟ್ಟಿ, ತಹಸೀಲ್ದಾರ್ ಮಹಾದೇವ ಎಂ. ಸನಮೂರಿ, ತಾಲೂಕುಮಟ್ಟದ ಅಧಿಕಾರಿಗಳಾದ ಇಒ ಉಮೇಶ ಸಿದ್ನಾಳ, ಹೊಳಬಸಪ್ಪಕರೆಹೊನ್ನ, ಮೋಹನ ಕೊರಡ್ಡಿ, ಮಹಮ್ಮದ ಹನಿಫ್ ತಹಸೀಲ್ದಾರ್, ಮಹೇಶ ದಂಡನ್ನವರ, ವಿಜಯಕುಮಾರ ಜಿ.ಕೆ., ಚನ್ನಬಸವ ಮಾಚನೂರ, ವಿದ್ಯಾ ಕೋರೆಪ್ಪಗೋಳ, ಅಶೋಕ ಕ್ಯಾದಗಿರಿ, ವಿನೋದ ಸಂಕೆಣ್ಣವರ, ಪಿಡಿಒಗಳಾದ ಶ್ರೀನಿವಾಸ ಚಿಗರಡ್ಡಿ, ಟಿ.ಆರ್. ಶಿಲ್ಪಶ್ರೀ, ಶಿಕ್ಷಕರಾದ ರಮೇಶ ಸಿಂಗರಡ್ಡಿ, ಆರ್. ಎಸ್. ಪಾಟೀಲ, ಎಂ.ಎನ್. ಕೋಲಾರ ಇತರರಿದ್ದರು.

# ಹುಲ್ಯಾಳ ಗ್ರಾಪಂ ಅಧ್ಯಕ್ಷೆ ಸುವರ್ಣಾ ನ್ಯಾಮಗೌಡ



**ಜಮಖಂಡಿ:** ತಾಲೂಕಿನ ಹುಲ್ಯಾಳ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಸುವರ್ಣಾ ರಾಮಪ್ಪ ನ್ಯಾಮಗೌಡ ಆಯ್ಕೆಯಾಗಿದ್ದಾರೆ.

ದಾನಮ್ಮ ಹಿರೇಮಠ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು.

ಚುನಾವಣಾಧಿಕಾರಿ ತಾಪಂ ಇಒ ಸಂಜೀವ ಜುನ್ನೂರ ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ತಾಪಂ ಎಫ್?ಡಿಎ ರಾಜೀವ ಗುಡೆನ್ನವರ ಕಾರ್ಯನಿರ್ವಹಿಸಿದರು.

ಗ್ರಾಪಂ ಸದಸ್ಯರಾದ ಮಹಾದೇವ ಗುಡೆನ್ನವರ, ದಾನಮ್ಮ ಹಿರೇಮಠ, ಶ್ರೀಶೈಲ ಸುನಗದ, ಸಿದ್ದಪ್ಪ ತುಂಗಳ, ಬಂಗಾರೆವ್ವ ಝುಲ್ಫಿ, ಲಚ್ಚಪ್ಪ ಹೆಬ್ಬಾಳಟ್ಟಿ, ಸವಿತಾ ಕೃಷ್ಣಗೋಳ,

ಹನುಮವ್ವ ಹಲಗಲಿ, ಹಿರಿಯರಾದ ಅಶೋಕ ಝುಲ್ಪಿ, ಮಾನಿಂಗ ಮುಗಳಖೋಡ, ನಿಂಗಪ್ಪ ಮುಂಡಾಗಣಿ ಇದ್ದರು.

# ವೇಮಾನಂದ ಸ್ವಾಮೀಜಿ, ಮಲ್ಲಮ್ಮ 'ಭಕ್ತಿ ರತ್ನಗಳು'



**ಇಳಕಲ್ಲ(ಗ್ರಾ):** ರಡ್ಡಿ ಸಮಾಜದ ಧರ್ಮಗುರು ವೇಮಾನಂದ ಸ್ವಾಮೀಜಿ ಮತ್ತು ಹೇಮರಡ್ಡಿ ಮಲ್ಲಮ್ಮ ಸಮಾಜದ 'ಭಕ್ತಿ ರತ್ನಗಳು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ತಾಲೂಕಿನ ಹಿರೇಸಿಂಗನಗುತ್ತಿ ಗ್ರಾಮದಲ್ಲಿ ನಿರ್ಮಿಸಲಾದ ವೇಮಾನಂದ ಸ್ವಾಮೀಜಿ ಮತ್ತು ಹೇಮರಡ್ಡಿಮಲ್ಲಮ್ಮದೇವಸ್ಥಾನದ ಒಂದು ತಿಂಗಳವರೆಗೆ ನಡೆದ ಮಂಡಲಪೂಜಾ ಮುಕ್ತಾಯ ಕಾರ್ಯಕ್ರಮದಲ್ಲಿ ಸೋಮವಾರ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶವಾದ ಹಿರೇಸಿಂಗನಗುತ್ತಿಯಲ್ಲಿ ಇಂತಹ ಅದ್ದೂರಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಿಜಕ್ಕೂ ಒಂದು ದೊಡ್ಡ ಸಾಧನೆ. ಸಮಾಜದವರೆಲ್ಲ ನಿತ್ಯ ದೇವಸ್ಥಾನಕ್ಕೆ ಆಗಮಿಸಿ ಪೂಜೆ, ಪುನಸ್ಕಾರ ಸಲ್ಲಿಸಬೇಕು ಎಂದರು. ಮಾಜಿ ಸಚಿವ ಅಮರೇಗೌಡ ಭಯ್ಯಾಪುರ ಮಾತನಾಡಿ, ಸಮಾಜದ ಕುಲ ತಿಲಕರಾದ ಹೇಮರಡ್ಡಿ ಮಲ್ಲಮ್ಮಳ ಆದರ್ಶಗಳನ್ನು ಮೈಗೂಡಿಸಿಕೊಂಡು ಸನ್ನಡತೆಯ ಮಾರ್ಗದಲ್ಲಿ ಸಾಗಬೇಕು. ಮುಂದಿನ ಪೀಳಿಗೆಗೆ ಹೇಮರಡ್ಡಿ ಮಲ್ಲಮ್ಮಳ ಜೀವನಗಾಥೆ ತಿಳಿಸಬೇಕು ಎಂದರು.

ರೆಡ್ಡಿ ಗುರುಪೀಠದ ವೇಮಾನಂದ ಸ್ವಾಮೀಜಿ ಹಾಗೂ ನಂದವಾಡಗಿಯ ಡಾ. ಚನ್ನಬಸದೇಶಿಕೇಂದ್ರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪರತಗೌಡ ಪಾಟೀಲ, ಎಂ. ಆರ್. ಪಾಟೀಲ, ಶಿವನಗೌಡ ಅಗಸಿಮುಂದಿನ, ಸಮಾಜದ ಮುಖಂಡರು ಹಿರಿಯರು ಹಿರಿಯರು ಇದ್ದಾರೆ.

# ಕುಳಗೇರಿಯಲ್ಲಿ ಸ್ವಚ್ಛತೆಯೇ ಸೇವೆ ಅಭಿಯಾನ




**ಕುಳಗೇರಿ ಕ್ರಾಸ್:** ಗಾಂಧಿ ಜಯಂತಿ ಪ್ರಯುಕ್ತ ಗ್ರಾಮದ ರಾಶಿ ಸಮೂಹ ಶಿಕ್ಷಣ ಸಂಸ್ಥೆಯ ಭುವನೇಶ್ವರಿ ಸ್ವತಂತ್ರ ಪಪೂ ಮಹಾವಿದ್ಯಾಲಯ ಹಾಗೂ ಗೋವನಕೊಪ್ಪದ ಆದಿಶಕ್ತಿ ಸಾಂಸ್ಕೃತಿ ಜಾನಪದ ಕಲಾ ತಂಡದಿಂದ ಸ್ವಚ್ಛತೆಯೇ ಸೇವೆ ಅಭಿಯಾನ ನಡೆಯಿತು.

ಗ್ರಾಮದ ಬಸ್ ನಿಲ್ದಾಣ ಪೊಲೀಸ್ ಠಾಣೆ ಆವರಣ, ಮತ್ತಿತರ ಸಾರ್ವಜನಿಕರ ಸ್ಥಳಗಳನ್ನು ಸ್ವಚ್ಛಗೊಳಿಸಲಾಯಿತು.

ಗ್ರಾಪಂ ಮಾಜಿ ಸದಸ್ಯರಾದ ಸಣ್ಣಬೀರಪ್ಪ ಪೂಜಾರ, ಗದ್ದಿಗೌಡ ಪಾಟೀಲ, ಗ್ರಾಪಂ ಅಧ್ಯಕ್ಷೆ ರೇಣುಕಾ ಹಿರಗನ್ನವರ, ಪಿಡಿಒ ಎಸ್. ಜಿ. ಪರಸನ್ನವರ, ಸದಸ್ಯರಾದ ವೆಂಕಣ್ಣ ಹೊರಕೇರಿ, ಹನುಮಂತ ನರಗುಂದ, ಮಾರುತಿ ತಳವಾರ, ರಾಮನಗೌಡ ದ್ಯಾವನಗೌಡ್ರ, ಚುರ್ಚಪ್ಪ ಜಾಡರ, ಆರ್. ಎಸ್. ಮರೆನ್ನವರ, ಸಿದ್ದಪ್ಪ ದಂಡಿನ, ಪ್ರಚಾರ್ಯೆ ರೂಪಾ ಪಾಟೀಲ, ಉಪನ್ಯಾಸಕರಾದ ಬಿ.ಕೆ. ಹೊರಕೇರಿ, ಶೀಲಾ ಮೇಟಿಮಠ, ಎಸ್. ಎಚ್. ಮೇಟಿ, ಎಚ್.ಎಚ್. ಪೂಜಾರ, ಎಂ.ಬಿ. ಕೋರಣ್ಣವರ, ಜಾನಪದ ಕಲಾತಂಡದವರಾದ ಶಂಕರ ಹೊರಕೇರಿ ಇತರರಿದ್ದರು.

# ಭೂಮಿಯ ಅವನತಿ ತಡೆಯುವುದೇ ಉದ್ದೇಶ



**ಕೆರೂರ:** ಮರಗಳನ್ನು ನೆಟ್ಟು ಭೂಮಿಯ ಅವನತಿ ತಡೆಯುವುದೇ ಕಾರ್ಯಕ್ರಮ ಉದ್ದೇಶವಾಗಿದೆ ಎಂದು ಪಪಂ ಮುಖ್ಯಾಧಿಕಾರಿ ರಮೇಶ ಮಾಡಬಾಳ ಹೇಳಿದರು.

ಪಟ್ಟಣ ಪಂಚಾಯಿತಿ ಆವರಣದಲ್ಲಿ ಮಂಗಳವಾರ ಅಮ್ಮನ ಹೆಸರಿನಲ್ಲಿ ಒಂದು ವೃಕ್ಷ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವೇಗವಾಗಿ ಬೆಳೆಯುತ್ತಿರುವ ಪ್ರಪಂಚದಲ್ಲಿ ಮಾನವನ ದುರಾಸೆಯಿಂದ ಸಾಕಷ್ಟು ಗಿಡಗಳು ನಾಶವಾಗಿವೆ. ಭೂಮಿ ಮೇಲಿನ ಸಕಲ ಜೀವಿಗಳ ಒಳಿತಿಗಾಗಿ ಗಿಡಗಳನ್ನು ನೆಡುವುದು ಅತ್ಯಗತ್ಯ ಎಂದರು.

ಪಪಂ ಇಂಜಿನಿಯರ್ ಎಂ.ಎ. ಹೊಸಮನಿ ಮಾತನಾಡಿ, ಪರಿಸರವನ್ನು ನಾವು ಸಂರಕ್ಷಿಸಿದರೆ ಅದು ನಮ್ಮನ್ನ ಸಂರಕ್ಷಿಸುತ್ತದೆ. ಭೂಮಿ ಮರುಭೂಮಿಯಾಗುವುದನ್ನು ತಡೆಯಲು ಪ್ರತಿಯೊಬ್ಬರೂ ತಮ್ಮ ಮನೆ ಮುಂದೆ ಗಿಡಗಳನ್ನು ನೆಡಬೇಕು ಎಂದು ಹೇಳಿದರು.

ಪಪಂ ಅಧ್ಯಕ್ಷೆ ನಿರ್ಮಲಾ ಮದಿ, ಉಪಾಧ್ಯಕ್ಷ ಮೋದಿನಸಾಬ ಚಿಕ್ಕೂರ, ಮುಖಂಡರಾದ ಸದಾನಂದ ಮದಿ, ಸುರೇಶ ಪೂಜಾರ, ಸಿಬ್ಬಂದಿಗಳಾದ ನವೀನ ಮಾಹಜನ್ನವರ, ಬಸವರಾಜ ಕಟ್ಟಿಮನಿ, ಜಿ. ಎ. ನದಾಫ್, ಅನಿಲ ಕಪಾಟೆ, ಅಶ್ವತ್ ರಂಗನಗೌಡ್ರ,

ಸಂಗಮೇಶ ಮಾದರ, ಗೀತಾ ಕಲಗುಡಿ, ಮಂಜುಳಾ ಹಿರೇಮಠ ಇತರರಿದ್ದರು.

# ದೇಶದ ಆರ್ಥಿಕ ಬೆಳೆವಣಿಗೆಯಲ್ಲಿ ಯುವ ಸಮುದಾಯದ ಪಾತ್ರ ಬಹುಮುಖ್ಯ : ವಿನಯ ಅಸುಂಡೆ



**ಅಥಣಿ :** ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಬಹಳ ಪ್ರಮುಖವಾಗಿದ್ದು ಕೌಶಲ್ಯ ಮತ್ತು ತಂತ್ರಜ್ಞಾನದಲ್ಲೂ ಮುಂದಿರುವ ಯುವ ಸಮುದಾಯ ದೇಶದ ಆರ್ಥಿಕತೆ ಬೆಳೆವಣಿಗೆಗೆ ಮುಖ್ಯ ಪಾತ್ರ ವಹಿಸುತ್ತಿದೆ ಎಂದು ಬೆಳಗಾವಿಯ ಖ್ಯಾತ ಲೆಕ್ಕ ಪರಿಶೋಧಕ ವಿನಯ ಅಸುಂಡೆ ಹೇಳಿದರು.

ಅವರು ಜಾಧವಜಿ ಶಿಕ್ಷಣ ಸಂಸ್ಥೆಯ ಜೆ.ಎ.ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ " ಸಿಎ ಫೌಂಡೇಶನ್ ನ ಒಳನೋಟ "ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮ ಪಡಿಸಿಕೊಳ್ಳುವುದರ ಜೊತೆಗೆ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮ ಪಡಿಸಿದರೆ ಜನರ ಜೀವನ ಮಟ್ಟ ಉತ್ತಮಗೊಳ್ಳುತ್ತದೆ. ಪ್ರತಿಯೊಬ್ಬರಿಗೆ ಪೌಷ್ಟಿಕ ಆಹಾರ, ಉತ್ತಮ ಪರಿಸರ ಹಾಗೂ ಗುಣ ಮಟ್ಟದ ಶಿಕ್ಷಣ ನೀಡುವುದು ಸರಕಾರದ ಆರ್ಥಿಕ ಪರಿಸ್ಥಿತಿಯು ಉತ್ತಮ ರೀತಿಯಲ್ಲಿ ಇದ್ದಾಗ ಮಾತ್ರ ಈ ಸಾಧ್ಯ.

ಈ ವೇಳೆ ಜೆಎ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಎಂ.ಪಿ.ಮೇತ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿ ಉತ್ತಮ ಗುಣಮಟ್ಟ ಶಿಕ್ಷಣ ಪಡೆಯಬೇಕು ಎಂಬುದು ಮಹಾವಿದ್ಯಾಲಯದ ಪ್ರಮುಖ ಉದ್ದೇಶವಾಗಿದೆ. ಈ ಕಾರಣಕ್ಕಾಗಿ ಬೇರೆ ಬೇರೆ ವಿಭಾಗಗಳಲ್ಲಿ ವಿಧ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದ್ದು ವಿಧ್ಯಾರ್ಥಿಗಳು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಚಂದ್ರಶೇಖರ ಎನ್ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು.

ಭಾರತಿ ಅಡಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಸುರೇಶ ದಾಸರಡ್ಡಿ, ಶಂಕರ ಕಮತಗಿ, ರಮೇಶ ಮಾಳಿ, ಅನಿಲ ಅಂಕಲಗಿ, ಪೂಜಾ ಭಂಗಿ, ಆಶಾ ಹೀರೇಮಠ ಮೊದಲಾದ ಉಪನ್ಯಾಸಕರು ಕಾರ್ಯಾಗಾರದಲ್ಲಿ ಹಾಜರಿದ್ದರು

# ಶೈಕ್ಷಣಿಕ ಜಾಗೃತಿ ಮೂಡಿಸಿದ ಕಲಾಜಾಥಾ ಕಾರ್ಯ ಸ್ಮರಣೀಯ



**ಜಮಖಂಡಿ :** ಶಿಕ್ಷಕರು ಪಾಠಬೋಧನೆ ಮಾಡುವ ಜೊತೆಗೆ ಕಲೆ, ಸಾಹಿತ್ಯ, ಸಂಗೀತ ಹೀಗೆ ವಿಶಿಷ್ಟ ಹವ್ಯಾಸಗಳನ್ನು ಬೆಳೆಸಿಕೊಂಡು ಕಲಾಜಾಥಾ ಮೂಲಕ ಶೈಕ್ಷಣಿಕ ಜಾಗೃತಿ ಮೂಡಿಸಿದ್ದು ಸ್ಮರಣೀಯ ಕ್ಷಣಗಳೆಂದು ಹುಲ್ಯಾಳದ ಹಿರಿಯ ಸಾಹಿತಿ ಗುರುನಾಥ ಸುತಾರ ಹೇಳಿದರು.

ತಾಲೂಕಿನ ಸಿದ್ದಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ವಿಠ್ಠರಾಯ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಎಸ್. ಎಲ್. ರಾಯಣ್ಣವರ ಶಿಕ್ಷಕರು ಅಭಿನಯದ ಮೂಲಕ ಕಲಾಜಾಥಾ ತಂಡದಲ್ಲಿ ಗಮನಸೆಳೆದಿದ್ದಾರೆ. ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದರು.

ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ. ಜಿ. ಕಡಕೋಳ ಮಾತನಾಡಿ, ಶಿಕ್ಷಕರ ಸಂಘಟನೆಯಲ್ಲಿ, ಕಲಾಜಾಥಾದಲ್ಲಿ, ಪಾಠ ಬೋಧನೆಯಲ್ಲಿ ರಾಯಣ್ಣವರ ಎಲ್ಲರ ಮೆಚ್ಚುಗೆ ಗಳಿಸಿದವರು ಎಂದರು.

ಕಲಾಜಾಥಾ ತಂಡದ ಸದಸ್ಯ, ನಿವೃತ್ತ ಶಿಕ್ಷಕ ಎಸ್. ಎಲ್. ರಾಯಣ್ಣವರ, ಜಿಲ್ಲಾ ಮಟ್ಟದ ಶಿಕ್ಷಕರ ಪ್ರಶಸ್ತಿ ಪಡೆದ ಭಾರತಿ ಮದಿನವರ ಅವರನ್ನು ತಾಲೂಕು ಕಲಾಜಾಥಾ ತಂಡದ ವತಿಯಿಂದ ಸನ್ಮಾನಿಸಲಾಯಿತು.

ರಬಕವಿ-ಬನಹಟ್ಟಿ ತಾಲೂಕು ಕಸಾಪ ಅಧ್ಯಕ್ಷ ಮ. ಕ. ಮೇಗಾಡಿ, ಕಲಾಜಾಥಾ ತಂಡದ ಸದಸ್ಯರಾದ ಮಲ್ಲಿಕಾರ್ಜುನ ಗಡೆಣ್ಣವರ, ಪಿ. ಎಂ. ಭಜಂತ್ರಿ, ಶಾಂತಪ್ಪ ಕೆ. ಅವರು ನಾಡು ನುಡಿ ಗೀತೆಗಳು, ವಚನಗಳು, ಜಾನಪದ ಗೀತೆಗಳನ್ನು ಹಾಡಿದರು. ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಪಿ. ಎಸ್. ಕಟ್ಟಿಮನಿ ಹಾರ್ಮೋನಿಯಂ ಸಾಥ್, ಕಲಾವಿದ ಮಲ್ಲಿಕಾರ್ಜುನ ನಾವಿ ತಬಲಾ ಸಾಥ್ ನೀಡಿದರು. ಗ್ರಾಮದ ಮುಖಂಡರಾದ ಈರಯ್ಯ ಹಿರೇಮಠ ಸಾನ್ನಿಧ್ಯ ವಹಿಸಿ ಕಲಾಜಾಥಾ ತಂಡ ಹಾಡಿದ ಹಾಡುಗಳು, ಪ್ರಹಸನಗಳು, ಕಿರುನಾಟಕಗಳು ಗ್ರಾಮಸ್ಥರ ಗಮನ ಸೆಳೆದಿವೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ವಿಠ್ಠಲ ಶಿಕರೆಪ್ಪಗೋಳ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಮುಖ್ಯಗುರು, ಕಲಾತಂಡದ ನಾಯಕ ಎ. ಎಂ. ಕುಣಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಶಿಕ್ಷಕ ಎಸ್. ಎನ್. ಮಣ್ಣೂರ ನಿರೂಪಿಸಿದರು. ಐ. ಎಂ. ದೊಡ್ಡವಾಡ ವಂದಿಸಿದರು.

# ಉದ್ಯೋಗಂ ಮಹಿಳಾ ಲಕ್ಷಣಂ



**ಮಹಾಲಿಂಗಪುರ:** ಈಗ ಕಾಲ ಬದಲಾಗಿದೆ. ಮಹಿಳೆಯರು ಎಲ್ಲ ರಂಗಗಳಲ್ಲೂ ಮುಂದುವರಿದಿದ್ದಾರೆ. ಈಗ 'ಉದ್ಯೋಗಂ ಮಹಿಳಾ ಲಕ್ಷಣಂ' ಎಂಬಷ್ಟರ ಮಟ್ಟಿಗೆ ಸರ್ವ ಕ್ಷೇತ್ರಗಳಲ್ಲೂ ಮಹಿಳೆಯರದ್ದೇ ಪಾರುಪತ್ಯ ಎಂದು ಸ್ಥಳೀಯ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದ ಸಹಜಾನಂದ ಸ್ವಾಮಿಗಳು ಹೇಳಿದರು.

ಪಟ್ಟಣದ ಬಸವನಗರದ ಸಮುದಾಯ ಭವನದಲ್ಲಿ ಸಿ.ಎಂ. ಹುರಕಡ್ಲಿ ಫೌಂಡೇಷನ್, ಹೊಳೆಮಠದ ಐರಣಿ ಮಹಾಸಂಸ್ಥಾನ ಹಾಗೂ ದಾವಣಗೆರೆಯ ಸ್ಫೂರ್ತಿ ನಗರ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಹಿಳಾ ಉಚಿತ ಸ್ವಯಂ ಉದ್ಯೋಗ ತರಬೇತಿ ಶಿಬಿರದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಹಿಳೆಯರಿಗೆ ಸ್ವಾವಲಂಬನೆ, ಆರ್ಥಿಕ ಸದೃಢ, ಕೌಶಲ ವರ್ಧನೆಗಾಗಿ ಉಚಿತ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಸ್ಫೂರ್ತಿ ತರಬೇತಿ ಸಂಸ್ಥೆಯ ರಾಜ್ಯ ಸಂಘಟಕ ಎಂ. ಗುಡ್ಡಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಹತೆ, ವಯಸ್ಸು, ಜಾತಿ, ಧರ್ಮದ ನಿರ್ಬಂಧವಿಲ್ಲದೆ ಎಲ್ಲ ಮಹಿಳೆಯರಿಗೂ ಉಚಿತವಾಗಿ ಟೆಕ್ಸ್‌ಟೈಲ್ ಪ್ರಿಂಟಿಂಗ್, ಸ್ಕ್ರೀನ್ ಪ್ರಿಂಟಿಂಗ್, ವೆಲ್ವೆಟ್ ಡಿಸೈನಿಂಗ್, ಕ್ಲಾಥ್ ವಾಟರ್‌ಪ್ರ್? ಪ್ರಿಂಟಿಂಗ್, ಮ್ಯಾಟ್ ಪ್ರಿಂಟಿಂಗ್, ?ಯಾಷನ್ ಡಿಸೈನಿಂಗ್, ಕಟಿಂಗ್, ಪಿಲ್ಲೋ ಕವರ್, ಬ್ಯೂಟಿಷಿಯನ್, ಸ್‌ಟಾ ಡಾಲ್ ಮೇಕಿಂಗ್, ಮೆಹಂದಿ, ಜೂಲ್ ವರ್ಕ್ ಮುಂತಾದ ತರಬೇತಿ ನೀಡುತ್ತಿದೆ. ಮಹಿಳೆಯರು ತಮ್ಮ ಆರ್ಥಿಕ ಸದೃಢತೆಗೆ ಈ ತರಬೇತಿಯ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಜಯರಾಮ ಶೆಟ್ಟಿ, ಚನ್ನಬಸು ಹುರಕಡ್ಲಿ ಮಾತನಾಡಿದರು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಉದ್ಘಾಟಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಬಲವಂತಗೌಡ ಪಾಟೀಲ, ಸಿದ್ಧಾರೂಢ ಮಠದ ಉತ್ತರಾಧಿಕಾರಿ ಸಿದ್ಧಾನಂದ ಭಾರತಿ ಸ್ವಾಮಿಗಳು, ಪುರಸಭೆ ಸದಸ್ಯೆಯರಾದ ಸವಿತಾ ಹುರಕಡ್ಲಿ, ಚಾಂದನಿ ನಾಯಕ,

ಗಣ್ಯರಾದ ಮಂಜು ಬಕರೆ, ಶ್ರೀಶೈಲ ಬಾಡನವರ, ಈರಪ್ಪ ಕಡಕೋಳ, ಭೀಮಶೀ ಪೂಜಾರಿ, ಕಾನಿಪ ಸಂಘದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಮಹಾಲಿಂಗಪ್ಪ ಕಂಠಿ, ಶ್ರೀಶೈಲ ಬಳಗಾರ, ಮಲಕಾಜಪ್ಪ ಹನಗಂಡಿ, ದುಂಡಪ್ಪ ಮುರಗೋಡ ಇತರರಿದ್ದರು.

ಕಾವ್ಯ ಮಾಳಿ ಪ್ರಾರ್ಥಿಸಿದರು. ಚಂದ್ರಶೇಖರ ಮೋರೆ ಸ್ವಾಗತಿಸಿದರು. ಪತ್ರಕರ್ತ ನಾರನಗೌಡ ಉತ್ತಂಗಿ ನಿರೂಪಿಸಿದರು.

# ಯಾದವಾಡ ಕುಟುಂಬಕ್ಕೆ 5 ಲಕ್ಷ ರೂಗಳ ಪರಿಹಾರ ಧನದ ಆದೇಶ ಪ್ರತಿ ವಿತರಿಸಿದ ಶಾಸಕ ಲಕ್ಷ್ಮಣ ಸವದಿ



**ಅಥಣಿ :** ಇತ್ತೀಚಿಗೆ ಸುರಿದ ಭಾರಿ ಮಳೆಯಿಂದ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಭಾಗೀರಥಿ ನಾಲಾ (ಮಸೂಬಾನ ಹಳ್ಳ) ದಲ್ಲಿ ಕೊಚ್ಚಿ ಹೋಗಿ ಮೃತ ಪಟ್ಟಿದ್ದ ಪಟ್ಟಣದ ನಿವಾಸಿ ಗುರುರಾಜ ಯಾದವಾಡ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾದ 5 ಲಕ್ಷ ರೂ ಗಳ ಪರಿಹಾರ ಧನದ ಆದೇಶ ಪತ್ರವನ್ನು ಮೃತರ ಕುಟುಂಬದವರಿಗೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ವಿತರಿಸಿದರು.

ಪರಿಹಾರ ಆದೇಶ ಪತ್ರವನ್ನು ವಿತರಿಸಿ ಶಾಸಕ ಲಕ್ಷ್ಮಣ ಸವದಿ ಮಾತನಾಡಿ ಕಳೆದು ಹೋದ ಸಮಯ. ಹೋದ ಪ್ರಾಣ ವಾಪಸ ತರಲು ಸಾಧ್ಯವಿಲ್ಲ. ಈ ರೀತಿ ಅವಘಡಗಳು ಸಂಭವಿಸದಂತೆ ಸಾರ್ವಜನಿಕರು ಎಚ್ಚರ ವಹಿಸಬೇಕು. ಸರ್ಕಾರದಿಂದ ಮೃತರ ಕುಟುಂಬದವರಿಗೆ 5 ಲಕ್ಷ ರೂಗಳ ಪರಿಹಾರದ ಆದೇಶ ಪತ್ರವನ್ನು ನೀಡಲಾಗಿದೆ ಅದನ್ನು ಕುಟುಂಬ ನಿರ್ವಹಣೆಗೆ ಉಪಯೋಗಿಸಿಕೊಳ್ಳಬೇಕು. ಮೃತರ ಕುಟುಂಬಕ್ಕೆ ಭಗವಂತನು ದುಃಖ ಭರಿಸುವ ಶಕ್ತಿ ನೀಡಲಿ ಎಂದು ಸಾಂತ್ವನ ಹೇಳಿ. ಆ ಕುಟುಂಬದವರ ಜೊತೆ ನಾನು ಯಾವತ್ತೂ ಇರುತ್ತೇನೆ ಎಂದು ಧೈರ್ಯ ತುಂಬಿದರು.

ಈ ವೇಳೆ ಪುರಸಭೆ ಅಧ್ಯಕ್ಷ ಶಿವಲೀಲಾ ಬುಟಾಳಿ. ಉಪಾಧ್ಯಕ್ಷ ಭುವನೇಶ್ವರಿ ಯಕಂಚ್ಚಿ. ಗ್ರೇಡ್ 2 ತಹಶೀಲ್ದಾರರಾದ ಗುಡಮೆ ಸರ್. ಮಹಾದೇವ ಬಿರಾದಾರ. ಪುರಸಭೆ ಮುಖ್ಯಾಧಿಕಾರಿ ಅಶೋಕ ಗುಡಿಮನಿ. ಅಥಣಿ ಹೋಬಳಿ ಕಂದಾಯ ನಿರೀಕ್ಷಕ ಶಿವಾನಂದ ಮೇಣಸಂಗಿ. ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶಿಕ್ಷಕಿ ಶೈಲಾ ಗೊಂಗಡಿ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ



**ತಾಳಿಕೋಟೆ :** ತಾಳಿಕೋಟೆ ತಾಲೂಕಿನ ದೇವರ ಹುಲಗಬಾಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕನ್ನಡ ಶಿಕ್ಷಕರಾಗಿ 25ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಶೈಲಾ ಗೊಂಗಡಿ ಅವರಿಗೆ ಪ್ರಾಮಾಣಿಕ ಮನಸುಗಳ ಸಂಗಮವಾದ ಬೆಂಗಳೂರಿನ "ಜನಸಿರಿ ತಂಡ(ರಿ)." ವತಿಯಿಂದ ಏರ್ಪಡಿಸಲಾದ ರಾಜ್ಯಮಟ್ಟದ ಶಿಕ್ಷಕರ ಹಬ್ಬ 2024ನೇ ಸಾಲಿನ ಅಂಗವಾಗಿ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಅತ್ಯತ್ತಮ ಶಿಕ್ಷಕಿ ಎಂದು ಪ್ರಶಸ್ತಿ ಪ್ರಧಾನ ಮಾಡಲಾಗಿದೆ.

ಇತ್ತೀಚಿಗೆ ಸಪ್ಟೆಂಬರ 28ರಂದು ಬೆಂಗಳೂರಿನ ಪುಟ್ಟಣ್ಣ ಚೆಟ್ಟಿಸ್ಥಳದ ಪುರಭವನ(ಟೌನ್ ಹಾಲ್)ನಲ್ಲಿ ಜರುಗಿದ ಈ ಸಮಾರಂಭದಲ್ಲಿ ಜನಸಿರಿ ತಂಡದ ಮುಖ್ಯಸ್ಥರಾದ ನಾಗಲೇಖ ಒಳಗೊಂಡು ಆ ತಂಡದಿಂದ ಸನ್ಮಾನ ಸ್ವೀಕರಿಸಿದ ಶ್ರೀಮತಿ ಶೈಲಾ ಗೊಂಗಡಿ ಅವರು ತಮ್ಮ ಶಿಕ್ಷಕ ವೃತ್ತಿಯಲ್ಲಿ ಮಕ್ಕಳಿಗೆ ಆಟೋಪಾಠ,ಸಂಗೀತ ಶಿಕ್ಷಣ ಅಲ್ಲದೇ ಪ್ರತಿಭಾ ಕಾರಂಜಿಕುರಿತು ಮಕ್ಕಳಿಗೆ ಜ್ಞಾನಮೂಡಿಸುವ ಕಾರ್ಯ ಕೈಗೊಂಡು ಹೆಸರುಪಡೆಯುವುದರೊಂದಿಗೆ ಕ್ರೀಯಾಶೀಲ ಶಿಕ್ಷಕಿಯಾಗಿ ಸೇವೆಗೆ ಮುಂದಾಗಿದ್ದುದ್ದನ್ನು ಗಮನಿಸಿದ ರಾಜ್ಯಮಟ್ಟದ ಜನಸಿರಿ ತಂಡ ಆಯೋಜಿಸಿದ ಶಿಕ್ಷಕರ ಹಬ್ಬ ಕಾರ್ಯಕ್ರಮದಲ್ಲಿ ಅತ್ಯುತ್ತಮ ಶಿಕ್ಷಕಿ ಎಂದು ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನಮಾಡಿ ಗೌರವಿಸಲಾಗಿದೆ.

# ಕಲೆಯನ್ನು ಜನರಿಗೆ ಅಸಕ್ತಿ ರೀತಿಯಲ್ಲಿ ಪ್ರದರ್ಶನ ಮಾಡಬೇಕು ಯಲ್ಲನಗೌಡ ಶಂಕರ ಬಂಡೆ





● ವಾರ್ತಾಲೋಕ ವಾರ್ತೆ

**ಬಳ್ಳಾರಿ :ಅ5.** ಕಲೆಯನ್ನು ಸಾರ್ವಜನಿಕರಿಗೆ ಅಸಕ್ತಿ ಬರುವ ರೀತಿಯಲ್ಲಿ ಪ್ರದರ್ಶನ ಮಾಡಬೇಕು ಅಗ ಮಾತ್ರ ಜನರ ಮೆಚ್ಚುಗೆಗೆ ಪಾತ್ರವಾಗಬಹುದು ಎಂದು ಕಲಾವಿದರ ಸಂಘದ ಜಿಲ್ಲಾಧ್ಯಕ್ಷರಾದ ಎಲ್ಲನಗೌಡ ಶಂಕರ್ ಬಂಡಿ ಹೇಳಿದರು.

ಅವರು ಇಂದು ನಗರದ ರಾಘವಾಂಕಲ ಮಂದಿರದಲ್ಲಿ ಅಲಾಪ್ ಸಂಗೀತ ಕಲಾ ಟ್ರಸ್ಟ್ ಬಳ್ಳಾರಿ ವತಿಯಿಂದ. ಹಮ್ಮಿಕೊಳ್ಳಲಾದ ದಸರಾ ಭಾವ ಸಂಗಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಧಾರಾವಾಹಿಯ ಸಮಯದಲ್ಲಿ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಟಿ ವಿ ಸಿರಿಯಲ್ ಬಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಬಹಳ ಸಂತೋಷ ಎಂದರು.

ನಿವೃತ್ತ ಬ್ಯಾಂಕ್ ನೌಕರರಾದ ಗೆಣಿಕೆ ಹಾಳು ಶಾಂತಪ್ಪ ನವರು ನಮ್ಮ ಬ್ಯಾಂಕ್ ಕಾಲೋನಿ ಉದ್ಯಾನವನದಲ್ಲಿ ಟ್ರಸ್ಟ್ ನವರು ದಸರಾ ಭಾವ ಸಂಗಮ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿರುವುದು ಬಹಳ ಸಂತೋಷ ಪ್ರತಿ ವರ್ಷ ದಸರಾ ನವರಾತ್ರಿ ಸಂದರ್ಭವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ನುಡಿದರು. ಟ್ರಸ್ಟ್ ಅಧ್ಯಕ್ಷರಾದ ರಮಣಪ್ಪ ಭಜಂತ್ರಿ ಸ್ವಾಗತ ಕೋರಿದರು. ಮುಖ್ಯ ಅತಿಥಿಗಳಾಗಿ ಬಸವರಾಜ ನಿವೃತ್ತ ಬ್ಯಾಂಕ್ ನೌಕರರು, ನೃತ್ಯ ಗುರುಗಳಾದ

ಎಸ್ ಕೆ ಜಿಲಾನಿ ಭಾಷ, ಸೂರ್ಯ ಕಲಾ ಟ್ರಸ್ಟ್ ಅಧ್ಯಕ್ಷರಾದ ಕೆ ಸಿ ಸುಂಕಣ್ಣ, ರಾಘವ ಮೆಮೋರಿಯಲ್ ಅಸೋಸಿಯೇಷನ್ ಜಂಟಿ ಕಾರ್ಯದರ್ಶಿಯಾದ ಎಂ ರಾಮಾಂಜನೇಯಲು, ಸಂಗೀತ ಗುರುಗಳಾದ ರಾಘವೇಂದ್ರ ಗೂಡುದೂರು ಆಗಮಿಸಿದ್ದರು. ತದನಂತರ ರಾಘವೇಂದ್ರ ಗೂಡುದೂರು ಮತ್ತು ತಂಡದಿಂದ ವಚನ ಗಾಯನ, ಎಮ್ಮಿಗನೂರು ಜಡೆಪ್ಪ ಮತ್ತು ತಂಡದಿಂದ ಜಾನಪದ ಗಾಯನ, ಎಸ್ ಕೆ ಜಿಲಾನಿ ಭಾಷ ಮತ್ತು ತಂಡದಿಂದ ಜಾನಪದ ನೃತ್ಯ, ಸೂರ್ಯ ಕಲಾ ಟ್ರಸ್ಟ್ ವತಿಯಿಂದ ಸಮೂಹ ನೃತ್ಯವನ್ನು ಪ್ರದರ್ಶನ ನೀಡಿದರು.

ಕಾರ್ಯಕ್ರಮ ನಿರೂಪಣೆ ವೀರೇಶ ದಳವಾಯಿ ನಿರ್ವಹಿಸಿದರು.

ಈ ಕಾರ್ಯಕ್ರಮದಲ್ಲಿ ಕುಮಾರ್ ಸ್ವಯಂ ಮತ್ತು ಗೆಳೆಯರು, ಶ್ರೀಮತಿ ಜ್ಯೋತಿ ಯಲ್ಲನಗೌಡ, ಸುಬ್ಬಣ್ಣ, ರಾಜಶೇಖರ, ರಾಜೇಶ್ ,ನಾಗನ ಗೌಡ, ಶಿವರುದ್ರ ಸ್ವಾಮಿ ಮತ್ತು ಬ್ಯಾಂಕ್ ಕಾಲೋನಿ ಜನರು ಬಹಳ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

## ಶರನ್ನವರಾತ್ರಿ ಅಂಗವಾಗಿ ಕುರುಗೋಡಿನಲ್ಲಿ ಸಂಭ್ರಮದ ದೇವಿಪುರಾಣ-ಪ್ರವಚನ

## ಪ್ರತಿಯೊಬ್ಬ ನಾಗರಿಕರು ದೇವಿಯ ಆರಾಧಕರಾಗಿರಿ- ಶ್ರೀಯಲ್ಲಮ್ಮತಾಯಿ



● ವಾರ್ತಾಲೋಕ ವಾರ್ತೆ

**ಕುರುಗೋಡು.ಆ.5** ಇಂಧಿನ ಅಧುನಿಕ ಭರಾಟೆಯಲ್ಲಿ ಪ್ರತಿಯೊಬ್ಬ ನಾಗರಿಕರು ಜಗನ್ನಾಥೆಯಾದ ಶ್ರೀದೇವಿಯ ಆರಾಧಕರಾಗಬೇಕು ಅಂದಾಗ ಮಾತ್ರ ಜೀವನದಲ್ಲಿ ಮುಕ್ತಿಸಿಗಲು ಸಾಧ್ಯ ಎಂದು ಕುರುಗೋಡು ಶ್ರೀಯಲ್ಲಮ್ಮತಾಯಿಯವರು ದೇವಿಯಸಂದೇಶ ನೀಡಿದರು. ಅವರು ಪಟ್ಟಣದ ಬಳ್ಳಾರಿರಸ್ತೆಯಲ್ಲಿನ ಶ್ರೀಯಲ್ಲಮ್ಮದೇವಿ ದೇವಸ್ಥಾನದಲ್ಲಿ ಕುರುಗೋಡು ಶ್ರೀಯಲ್ಲಮ್ಮದೇವಿ ಭಕ್ತಮಂಡಳಿ ವತಿಯಿಂದ 23ನೇ ವರ್ಷದ ಶರನ್ನವರಾತ್ರಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ದೇವಿಪುರಾಣದಲ್ಲಿ ಸಾನಿಧ್ಯವಹಿಸಿ ಆಶೀರ್ವದಿಸಿ ಮಾತನಾಡಿದ ಅವರು, ಪ್ರಸ್ತುತದಿನಮಾನಗಳಲ್ಲಿ ಮಹಿಳೆಯರು ಟಿವಿ, ಸಿನೆಮಾ, ಧಾರವಾಹಿಗಳ ವ್ಯಾಮೋಹದಿಂದ ಪುರಾಣ, ಪುಣ್ಯಕಥೆಗಳನ್ನು ಆಲಿಸುವುದು ಕಡಿಮೆಯಾಗಿವೆ ಎಂದು ವಿಷಾದ ವ್ಯಕ್ತಪಡಿಸಿದರು. ದೇವಿಪುರಾಣ-ಪ್ರವಚನ ಕಾರ್ಯಕ್ರಮದಲ್ಲಿ ಬಾದನಹಟ್ಟಿ ಕಲಾವಿದ ಎಸ್.ಗಾದಿಲಿಂಗಪ್ಪನವರು ಪ್ರವಚನ ನೀಡಿ ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯನು ದೇವಿಪುರಾಣವನ್ನು ಶ್ರಧ್ಧಾ-ಭಕ್ತಿಯಿಂದ ಆಲಿಸುವ ಮನೋಭಾವನೆಯನ್ನು ಮೈಗೂಡಿಸಿಕೊಳ್ಳಬೇಕು, ಅಂದಾಗ ಮಾತ್ರ ಜಗನ್ಮಾಥೆಯಾದ ದೇವಿಯು ನಮ್ಮ ಕಷ್ಟ-ಕಾರ್ಪಣ್ಯಗಳನ್ನು ದೂರಮಾಡುತ್ತಾಳೆ, ಆದ್ದರಿಂದ ದೇವಿ ಪುರಾಣವನ್ನು ಆಲಿಸುವ ಭಕ್ತರಿಗೆ ಆಯುಷ್ಯ, ಆರೋಗ್ಯ, ಮತ್ತು ಸಂಪತ್ತು ಕೊಟ್ಟು ಕರುಣಿಸುತಾಯಿ ಎಂದು ದೇವಿಯಲ್ಲಿ ಪ್ರಾರ್ಥಿಸಿದರು. ಪುರಾಣ ಪಠಣಕಾರರಾಗಿ ಬಾದನಹಟ್ಟಿಕಲಾವಿದ ಕೆ.ಜಗದೀಶ ಅವರು ನಡೆಸಿಕೊಟ್ಟರು. ಸಂಗೀತಸೇವೆಯನ್ನು ಕಲಾವಿದರಾದ ದೇವೆಂದ್ರಪ್ಪ, ಎರ್ರಿನಾಗೇಶ, ಕೆ.ಕರಿಬಸವ, ತಬಲಾವಾದಕರಾಗಿ ಹೆಚ್.ಮಲ್ಲಿಗೌಡ ಅವರು ಸಾಥ್‌ನೀಡಿದರು. ದೇವಿಪುರಾಣ ಕಾರ್ಯಕ್ರಮದಲ್ಲಿ ಶ್ರೀಯಲ್ಲಮ್ಮದೇವಿ ಭಕ್ತಮಂಡಳಿಯ ಎಲ್ಲಾ ಮುಖಂಡರು,ಪುರಾಣದ ವ್ಯವಸ್ಥಾಪಕರು, ಬಾದನಹಟ್ಟಿ, ವದ್ದಟ್ಟಿ, ಕುರುಗೋಡು ಗ್ರಾಮದ ಭಕ್ತರು, ಊರಿನ ಮುಖಂಡರು, ಮಹಿಳೆಯರು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ದೇವಿಪುರಾಣ ಕೇಳಲು ಬಂದ ಸಕಲ ಭಕ್ತರು ಪ್ರಸಾದಸ್ವೀಕರಿಸಿ ಶ್ರೀಯಲ್ಲಮ್ಮದೇವಿಯ ಕೃಪೆಗೆ ಪಾತ್ರರಾದರು.

# ಕಲ್ಲುಕಂಬ ಗ್ರಾಮದಲ್ಲಿ ಐಟೆಕ್‌ಶೌಚಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

## ಶೌಚಾಲಯವನ್ನು ಸ್ವಚ್ಚತೆಯಿಂದ ಬಳಿಸಿ, ಆರೋಗ್ಯವನ್ನು ಕಾಪಾಡಿಕೊಳ್ಳಿರಿ; ಶಾಸಕಗಣೇಶ



● ವಾರ್ತಾಲೋಕ ವಾರ್ತೆ

**ಕುರುಗೋಡು.ಆ.5** ಪ್ರತಿಯೊಬ್ಬ ಮಹಿಳೆಯರು ಸರ್ಕಾರದಿಂದ ನಿರ್ಮಾಣವಾಗುವ ಐಟೆಕ್ ಶೌಚಾಲಯವನ್ನು ಸ್ವಚ್ಚತೆಯಿಂದ ಬಳಸಿ, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಕಂಪ್ಲಿಕ್ಷೇತ್ರದ ಶಾಸಕ ಜೆಎನ್. ಗಣೇಶ ಅವರು ಮಹಿಳೆಯರಿಗೆ ಕರೆನೀಡಿದರು.

ಅವರು ಸಮೀಪದ ಕಲ್ಲುಕಂಬ ಗ್ರಾಮದಲ್ಲಿ ಮಹಿಳೆಯರ ಬೇಡಿಕೆಯಂತೆ 2023-24ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಸಮುದಾಯ ನೈರ್ಮಲ್ಯ ಸಂಕೀರ್ಣ ಘಟಕ ಯೋಜನೆಯ ರೂ.25ಲಕ್ಷ ವೆಚ್ಚದಿಂದ ನಿರ್ಮಾಣವಾಗುವ ಐಟೆಕ್‌ಶೌಚಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣಪ್ರ ದೇಶಗಳಲ್ಲಿ ಮಹಿಳೆಯರಿಗೆ ಶೌಚಾಲಯದ ಬೇಡಿಕೆ ಅನುಸಾರವಾಗಿ ಕಂಪ್ಲಿಕ್ಷೇತ್ರದ ಕೆಲ ಗ್ರಾಮಗಳಲ್ಲಿ ಐಟೆಕ್‌ಶೌಚಾಲಯ ಕಟ್ಟಡ ನಿರ್ಮಾಣ ಮಾಡಲಾಗುವುದು. ಆದರೆ ಶೌಚಾಲಯ ಕಟ್ಟಡ ನಿರ್ಮಾಣ ಎಷ್ಟುಮುಖ್ಯವೋ, ಅಷ್ಟೇ ಶೌಚಾಲಯವನ್ನು ಸರಿಯಾಗಿ ಬಳಸಬೇಕೆಂದು ಮಹಿಳೆಯರಿಗೆ ಸಲಹೆ ನೀಡಿದರು. ಜೊತೆಗೆ 15ನೇ ಹಣಕಾಸಿನ ಯೋಜನೆಅಡಿಯಲ್ಲಿ ಅದರ ನಿರ್ವಹಣೆ ಮತ್ತು ಸುಚಿತ್ವವನ್ನು ಕಾಪಾಡಲು ಗ್ರಾಮಪಂಚಾಯಿತಿಗೆ ಒಪ್ಪಿಸಲಾಗುವುದು ಎಂದು ನುಡಿದರು. ಈ ಸಂದರ್ಭದಲ್ಲಿ ಕುರುಗೋಡು ತಾಪಂ. ಕಾರ್ಯ ನಿರ್ವಾಹಕರಾದ ನಿರ್ಮಲ, ಕಲ್ಲುಕಂಬ ಗ್ರಾಪಂ. ಅಧ್ಯಕ್ಷ/ ಉಪಾಧ್ಯಕ್ಷ/ ಸರ್ವಸದಸ್ಯರು, ಊರಿನ ಮುಖಂಡರು, ಮತ್ತು ಏರಿಯಾದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಇದೇ ಮಾದರಿಯಲ್ಲಿ ಹೆಚ್.ವೀರಾಪುರ ಗ್ರಾಮದಲ್ಲಿರೂ.25ಲಕ್ಷವೆಚ್ಚದಿಂದ ಐಟೆಕ್‌ಶೌಚಾಲಯ ನಿರ್ಮಾಣ ಕಟ್ಟಡ ನಿರ್ಮಾ ಣಕಾಮಗಾರಿಗೆ ಭೂಮಿಪೂಜೆ, ಗುತ್ತಿಗನೂರು ಗ್ರಾಮದಲ್ಲಿ ರೂ.25ಲಕ್ಷ ವೆಚ್ಚದಿಂದ ಐಟೆಕ್‌ಶೌಚಾಲಯ ನಿರ್ಮಾಣ ಕಟ್ಟಡ ಕಾಮಗಾರಿಗೆ ಭೂಮಿಪೂಜೆ, ಗೆಣಿಕೆಹಾಳು ಗ್ರಾಮದಲ್ಲಿ ರೂ.25ಲಕ್ಷ ವೆಚ್ಚದಿಂದ ಐಟೆಕ್‌ಶೌಚಾಲಯ ಕಟ್ಟಡ ನಿರ್ಮಾಣಕಾಮಗಾರಿಗೆ ಶಾಸಕ ಜೆಎನ್.ಗಣೇಶ ಅವರು ಭೂಮಿಪೂಜೆ ನೆರವೇರಿಸಿದರು.

# ಮಹಿಳೆ ಕಾಣೆ ಪ್ರಕರಣ ದಾಖಲು

● ವಾರ್ತಾಲೋಕ ವಾರ್ತೆ

**ಹೊಸಪೇಟೆ (ವಿಜಯನಗರ) ಅಕ್ಟೋಬರ್ 05 (ಕ. ವಾ):** ಹೊಸಪೇಟೆ ರೈಲ್ವೆ ನಿಲ್ದಾಣ ದಿಂದ 17321 ಸಂಖ್ಯೆಯ ವಾಸ್ಕೋ ಡಿ ಗಾಮ-ಜೈಸಿದ್ ವೀಕ್ಲಿ ಎಕ್ಸ್‌ಪ್ರೆಸ್ ರೈಲುಗಾಡಿ ಹತ್ತಿ ಪ್ರಾಯಾಣಿಸಿದ 24 ವರ್ಷದ ಅಂಜಲಿ ಪ್ರಜಾಪತಿ ಎಂಬ ಮಹಿಳೆ ಕಾಣೆಯಾದ ಬಗ್ಗೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 27/2024ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಯು ಹೊಸಪೇಟೆ ರೈಲ್ವೆ ನಿಲ್ದಾಣದಿಂದ ಹೋದವರು ಮನೆಗೆ ಬಾರದೆ ಕಾಣೆಯಾಗಿರುತ್ತಾರೆ. ಮಹಿಳೆಯ ಪೋನ್ ನಂಬರ್‌ಗೆ ಕರೆ ಮಾಡಿದರೆ ಸ್ವಿಚ್ ಆಫ್ ಆಗಿದ್ದು, ಸಂಬಂಧಿಕರ ಮನೆಗು ಸಹ ಹೋಗಿರುದಿಲ್ಲ ಎಂದು ಮಹಿಳೆಯ ಪತಿಯು ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತಾರೆ.

ಮಹಿಳೆಯ ಚಹರೆ: ವಯಸ್ಸು 24 ವರ್ಷ, ಎತ್ತರ 157 ಸೆ.ಮೀ, ಕಪ್ಪು ಕೂದಲು, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕೆಂಪು ಮತ್ತು ತಿಳಿ ಹಳದಿ ಬಣ್ಣದ ಡಿಜೈನ್ ಚೂಡಿದಾರ ಹಾಗೂ ಕೆಂಪು ಬಣ್ಣದ ವೇಲ್ ಹಾಕಿಕೊಂಡಿರುತ್ತಾರೆ. ಕನ್ನಡ ಮತ್ತು ಹಿಂದಿ ಭಾಷೆ ಮಾತನಾಡುತ್ತಾರೆ.

ಈ ಕಾಣೆಯಾದ ಮಹಿಳೆಯು ಯಾರಿಗಾದರು ಕಂಡುಬಂದರೆ ಅಥವಾ ಮಾಹಿತಿ ಇದ್ದಲ್ಲಿ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಪಿ.ಎಸ್. ದೂ.ಸಂ: 08392-2276063, ಮೊ.ಸಂ: 9480802131, ಇ-ಮೇಲ್ bellaryrly@ksp.gov.in ಗೆ ಅಥವಾ ಬೆಂಗಳೂರು ರೈಲ್ವೇ ಕಂಟ್ರೋಲ್ ರೂಂ ಇ-ಮೆಲ್ dcrly@ksp.gov.in ಗೆ ಮಾಹಿತಿ ನೀಡುವಂತೆ ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್ ಕೆ ಡಿ ಆರ್ ಡಿ ಪಿ ವತಿಯಿಂದ ತಾಲ್ಲೂಕು ಮಟ್ಟದ ಒಕ್ಕೂಟ ಪದಾಧಿಕಾರಿಗಳ ಸಮಾವೇಶ ಕಾರ್ಯಕ್ರಮ



● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅಕ್ಟೋಬರ್ 5:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ 800 ವರ್ಷಗಳ ಇತಿಹಾಸ ಉಳ್ಳ ಪ್ರಸಿದ್ಧ ಕ್ಷೇತ್ರ ಧರ್ಮಸ್ಥಳದ ಹಿನ್ನಲೆ ಹಿನ್ನೆಲೆಯ ಬಗ್ಗೆ

1982 ರಲ್ಲಿ ಪ್ರಾರಂಭಗೊಂಡ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕ್ಷೇತ್ರ ರಿಂದ ನಡೆಯುತ್ತಿರುವ ಅಭಯದಾನದ ಪರಂಪರೆಯಲ್ಲಿ ಎಲ್ಲಾ ದುರ್ಬಲರಿಗೂ ಅಭಯ ಸಿಗಬೇಕೆಂಬ ಸದುದ್ದೇಶದಿಂದ ಪ್ರಾರಂಭಗೊಂಡ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ತನ್ನ ಮೂಲಕ ಸ್ವರೂಪವನ್ನು ಬಿಟ್ಟುಕೊಡದೆ ಸತತ ನಾಲ್ಕು ದಶಗಳ ದಶಕಗಳ ಪ್ರಯಾಣದಲ್ಲಿ ಅನೇಕ ಸವಾಲುಗಳಲ್ಲಿ ಎದುರಿಸಿ ಯಶಸ್ವಿಯಾಗಿ ಕರ್ತವ್ಯಗಳನ್ನು ನಿಭಾಯಿಸುತ್ತಾ ಬಂದಿದೆ ಸಮಾಜದಲ್ಲಿ ಎಲ್ಲಾ ಧರ್ಮಗಳ ಒಳಿತನ್ನು ಬಯಸುವ ಎಲ್ಲರ ಜೊತೆಯಲ್ಲಿ ಸೇರಿಕೊಂಡು ಅಭಿವೃದ್ಧಿಯ ಹೆಜ್ಜೆಗಳನ್ನಿರಿಸುತ್ತಿರುವುದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಇನ್ನೊಂದು ವೈಶಿಷ್ಟವಾಗಿದೆ ರಾಜ್ಯದ್ಯಂತ ಕರ್ತವ್ಯ ನಿರ್ವಹಿಸುತ್ತಿದೆ

ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದರ ಮೂಲಕ ಒಕ್ಕೂಟ ಪದಾಧಿಕಾರಿಗಳಿ ಮಾಹಿತಿ ಮಾರ್ಗದರ್ಶನ ನೀಡಿ ಒಕ್ಕೂಟ ಬಲವರ್ಧನೆಯ ಬಗ್ಗೆ ತಾಲ್ಲೂಕು ಮಟ್ಟದ ಒಕ್ಕೂಟ ಪದಾಧಿಕಾರಿಗಳ ಸಮಾವೇಶ ಕಾರ್ಯಕ್ರಮದಲ್ಲಿ ಎಸ್ ಕೆ ಡಿ ಆರ್ ಡಿ ಪಿ ಜಿಲ್ಲಾ ನಿರ್ದೇಶಕರಾದ ರೋಹಿತಾಕ್ಷ ತಿಳಿಸಿದರು.

ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃ ಯೋಜನೆಯಿಂದ ಬಳ್ಳಾರಿಯ ಜೋಳದ ರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ನಡೆದ ಕಾರ್ಯಕ್ರಮದ

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ರಿಜಿನಲ್ ಮ್ಯಾನೇಜರ್ ಗಿರಡ್ಡಿ ಮಾತನಾಡಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಸಂಘಗಳ ಸಾಲದ ವ್ಯವಹಾರ ಸಂಘದ ದಾಖಲಾತಿ ನಿರ್ವಹಣೆ. ಬ್ಯಾಂಕ್ ನಿಂದ ಸ್ವ ಸಹಾಯ ಸಂಘಗಳಿಗೆ ನೀಡುತ್ತಿರು ಬಡ್ಡಿದರ ಬಗ್ಗೆ . ಬ್ಯಾಂಕ್ ಗಳಿಂದ ಸಿಗುವ ಆರ್ಥಿಕ ನೆರವಿನ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸತೀಶ್ ಜಿ ಯೋಜನಾಧಿಕಾರಿಗಳು ತಾಲೂಕಿನ ಮೇಲ್ವಿಚಾರಕರ ಶ್ರೇಣಿಯ ಎಲ್ಲಾ ಸಿಬ್ಬಂದಿಗಳು ಬಳ್ಳಾರಿ-2 ಯೋಜನಾ ಕಚೇರಿ ವ್ಯಾಪ್ತಿಯ 65 ಒಕ್ಕೂಟದ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳು.

ಯೋಜನಾ ಕಛೇರಿಯ ಎಲ್ಲಾ ಸಿಬ್ಬಂದಿಗಳು. ತಾಲ್ಲೂಕಿನ ಎಲ್ಲಾ ಸೇವಾ ಪ್ರತಿನಿಧಿಗಳು. ಅಖಿಲ ಸೇವಾ ದಾರರು

ಸ್ವ ಸಹಾಯ ಸಂಘದ ಸದಸ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮದಲ್ಲಿ ಯಶಸ್ವಿಗೊಳಿಸಿದರು.

# ರೈತ ಬಂಧುಗಳಿಗೆ ಮುದ್ದಬಳ್ಳಿ ಶ್ರೀಕಾರ ಕಂಪನಿಯ ಮೆಕ್ಕೆಜೋಳ ಹೆಚ್ಚು ಇಳುವರಿ ಬಂದ ಕಾರಣ ಹರ್ಷೋದ್ಧಾರದ ದರ್ಬಾರ್



● ವಾರ್ತಾಲೋಕ ವಾರ್ತೆ

**ಕೊಪ್ಪಳ : ಅ5.** ರೈತ ಬಂಧುಗಳೆ ಶ್ರೀಕಾರ ಮೆಕ್ಕೆಜೋಳ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ. ಮುದ್ದಬಳ್ಳಿ ಗ್ರಾಮದಲ್ಲಿ. ದರ್ಬಾರ್

ರೈತರಾದ ಅಮರೇಗೌಡ ಮಾಲಿ ಪಾಟೀಲ್ ಇವರ ಹೊಲದಲ್ಲಿ. ಶ್ರೀಕಾರ ಕಂಪನಿಯ ಮೆಕ್ಕೆಜೋಳ ಬೀಜ 8199 ತಳಿಯನ್ನು ಬಿತ್ತನೆ ಮಾಡಿದ್ದಾರೆ ಇದು. ಊರಿನ ಪ್ರತಿಯೊಬ್ಬ ರೈತರು ಮೆಚ್ಚುವ ರೀತಿಯಲ್ಲಿ. ಅದ್ಭುತವಾಗಿ ಬೆಳೆದು ರೈತನ ಕುಷಿಯನ್ನು ಹೆಚ್ಚಿಸಿದೆ ಆದಕಾರಣ ಕಂಪನಿಯವರು ಇದನ್ನು ನೋಡಿ ಪ್ರತಿಯೊಬ್ಬ ರೈತರು ಕೂಡಾ ಇತರಹ ಬೆಳೆಸಿ ಒಳ್ಳೇ ಇಳುವರಿ ಪಡೆಯಲೆಂದು. ಪ್ರತಿಯೊಬ್ಬರಿಗೆ ತಳಿಯ ಬಗ್ಗೆ ಮಾಹಿತಿ ಗೊತ್ತಾಗಲೆಂದು. ಕಂಪನಿಯ ವತಿಯಿಂದ. ಇಂದು ದಿನಾಂಕ. 05/10 2024. ಶನಿವಾರ ..ರಂದು ಮುದ್ದಬಳ್ಳಿ. ಗ್ರಾಮದಲ್ಲಿ. ರೈತತ್ರೋತ್ಸವ ಕಾ೦ರ್ಯ೦ಕ್ರ೦ಮ೦ವ೦ನ೦್ನ೦. ಹಮ್ಮಿಕೊಳ್ಳಲಾಗಿತ್ತು ರೈತರ ಹೊಲಕ್ಕೆ ಮೆಕ್ಕೆಜೋಳದ ತೆನೆಗಳಿಂದ ಅಲಂಕೃತವಾಗಿ ಶೃಂಗಾರ ಅದ್ಭುತವಾಗಿ ಡೆಕೊರೇಷನ್ ಮಾಡಿ ರೈತರಿಗೆ ತೋರಿಸಲು 2. 3 ದಿನಗಳಿಂದ ಕೆಲಸ ಮಾಡಿ ಅಬ್ದುತವಾಗಿ ನಿರ್ಮಿಸಿದರು. . ಬೆಳದ ರೈತರಿಗೆ ಸನ್ಮಾನಿಸಲಾಯಿತು ಆಸಕ್ತ ರೈತರು. ಅಕ್ಕ ಪಕ್ಕದ ಹಳ್ಳಿಯವರು. ಹಾಗೂ ಪ್ರತಿಯೊಬ್ಬ ರೈತರು ಕೂಡಾ ಬಂದು ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಯುವ ರೈತರು. ಉತ್ಸಾಹಿ ರೈತರು. ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಕಾರ ಕಂಪನಿಯ ಮೆಕ್ಕೆಜೋಳ ಬೀಜ ವನ್ನು ಬಿತ್ತನೆ ಮಾಡಿ ಕಂಪನಿಯ ಹೆಚ್ಚು ಆದಾಯ ಗಳಿಸಿ ಎಂದು ಮ್ಯಾನೇಜರ್ ಕೆ. ರಾಜಶೇಖರ್ ಕೊಪ್ಪಳ ಕರೆನೀಡದರು

ಶ್ರೀಕಾರ ಕಂಪನಿಯ ಕೊಪ್ಪಳ ವಲಯದ ಶಿವರಾಜ್ ನಾಯಕ್ ಮಲ್ಲಪ್ಪ ಕುಕನೂರು ಸಂತೋಷ್ ಕೇಶವ್ ಗೌರೀಶ್ ಹಾಗೂ ಗಜೇಂದ್ರಗಡ ವಲಯದ ಪರಶುರಾಮ್ ಮಸಾಲಿ ರಾಜು ಸುಂಕದ ರಾಹುಲ್ ಉ ಹಾಗೂ ಮುದ್ದ ಬಳ್ಳಿಯ ರೈತರ ಮಿತ್ರರು ಊರಿನ ಪ್ರಮುಖರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

**ವರದಿಗಾರರು . ಮಂಗಳೂರು ಮಂಗಳೇಶ**

# RYMEC ಕಾಲೇಜಿನಲ್ಲಿ "ನವಸಂಗಮ" ಕಾರ್ಯಕ್ರಮ




● ವಾರ್ತಾಲೋಕ ವಾರ್ತೆ

**ಬಳ್ಳಾರಿ :ಅ5. ಬಳ್ಳಾರಿ :** ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ವೀರಶೈವ ವಿದ್ಯಾವರ್ಧಕ ಸಂಘದ ಸಂಸ್ಥೆಯಾದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರರಂದು 2024-25ನೇ ಸಾಲಿನ ಹೊಸ ವಿದ್ಯಾರ್ಥಿಗಳಿಗೆ "ನವಸಂಗಮ" " ಫ್ರೆಶರ್ ಡೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ ಎಂ. ಮುನಿರಾಜು ಮಾತನಾಡಿ, ಇಂಜಿನಿಯರಿಂಗ್ ಸೀಟು ಪಡೆಯಲು ಕಠಿಣ ಸ್ಪರ್ಧಾತ್ಮಕ ಪರೀಕ್ಷೆ ಉತ್ತೀರ್ಣರಾದ ನಂತರ, ಪ್ರತಿಯೊಬ್ಬ ವಿದ್ಯಾರ್ಥಿಯೂ ಕರ್ನಾಟಕದ ವಿವಿಧ ಸ್ಥಳಗಳಿಂದ ಒಂದೇ ಛತ್ರಿಯಡಿಯ ಈ ಸಂಸ್ಥೆಯಲ್ಲಿ ಬರುತ್ತಿದ್ದಾರೆ, ಅದಕ್ಕಾಗಿಯೇ ಈ ಕಾರ್ಯಕ್ರಮವನ್ನು ನವಸಂಗಮ ಎಂದು ಕರೆಯಲಾಗುತ್ತದೆ. ನನ್ನ ಆತ್ಮೀಯ ವಿದ್ಯಾರ್ಥಿಗಳೇ, ನೀವು ಭಾರತದ ದಕ್ಷಿಣ ರಾಜ್ಯಗಳ, ಕರ್ನಾಟಕದ ಅತ್ಯುತ್ತಮ ಕಾಲೇಜನ್ನು ಆಯ್ಕೆ ಮಾಡಿದ್ದೀರಿ,

ನಾನು ಈಗ ಏನಾಗಿದ್ದೇನೆ ಮತ್ತು ನಾಲ್ಕು ವರ್ಷಗಳ ನಂತರ ನಾನು ಏನಾಗಬೇಕು ಎಂದು ಯೋಚಿಸಿ, ಈಗ ನೀವು ಕಚ್ಚಾ ವಸ್ತುವಿನಂತಿದ್ದೀರಿ, ನೀವು

ಈ ಸಂಸ್ಥೆಯ ನಿಮ್ಮ ಶಿಕ್ಷಕರು, ಆರ್ಕಿಟೆಕ್ಟ್‌ಗಳು, ನಿಮ್ಮನ್ನು ಭಾರತೀಯ ಸಮಾಜದಲ್ಲಿ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಸಿದ್ಧರಾಗಿರುವಂತೆ

ರೂಪಿಸಲಿದ್ದಾರೆ. ನೀವು ಬೆಂಗಳೂರಿನ ಯಾವುದೇ ಟಾಪ್ ಕಾಲೇಜು ಅಥವಾ ಯಾವುದೇ ಮೆಟ್ರೋಪಾಲಿಟನ್ ಸಿಟಿಯಲ್ಲಿರುವಂತೆ ಉತ್ತಮವಾಗಿದ್ದೀರಿ.

ದಯವಿಟ್ಟು ನೆನಪಿಡಿ, ನೀವು ಪೋಷಕರು, ನಿಮಗೆ ಉತ್ತಮ ಬಟ್ಟೆ, ಉತ್ತಮ ಆಹಾರ ಮತ್ತು ಉತ್ತಮ ಶಿಕ್ಷಣ, ಒದಗಿಸಿದವರು, ಅವರು ಸಾಕಷ್ಟು ತ್ಯಾಗ

ಮಾಡಿದ್ದಾರೆ. ನೀವು ಅವರ ಬಗ್ಗೆ ಕೃತಜ್ಞತೆಯನ್ನು ಹೊಂದಿರಬೇಕು ಮತ್ತು ಅವರ ಖ್ಯಾತಿ, ಹೆಸರು, ಸಮಾಜದಲ್ಲಿ ತರಬೇಕಾಗಿದೆ. ದಯವಿಟ್ಟು ಕಷ್ಟಪಟ್ಟು ಕೆಲಸ ಮಾಡಿ ಮತ್ತು ಜೀವನದಲ್ಲಿ ಉತ್ತಮ ಸ್ಥಾನಗಳನ್ನು ಸಾಧಿಸಿ ಎಂದರು.

ವೀರಶೈವ ವಿದ್ಯಾವರ್ಧಕ ಸಂಘದ ಮಾಜಿ ಕಾರ್ಯದರ್ಶಿ ಚೋರನೂರು ಟ ಕೊಟ್ರಪ್ಪ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ "ನಿಮ್ಮ ಹೊಸ ಸ್ನೇಹಿತರ ವಲಯದಲ್ಲಿ ನೀವು ಸಂತೋಷವಾಗಿರಬೇಕು, ಒಳ್ಳೆಯ ಗುಣಗಳನ್ನು ಸಂಪಾದಿಸಿ, ಕೆಟ್ಟ ಅಭ್ಯಾಸಗಳಿಂದ ದೂರವಿರಿ. ನೆನಪಿಡಿ, ಇದು ನಮ್ಮ ಜೀವನದಲ್ಲಿ ಒಂದು ಮಹತ್ವದ ತಿರುವು, ಉತ್ತಮ ಶಿಕ್ಷಣವನ್ನು ಪಡೆದುಕೊಳ್ಳಿ, ಸೌಲಭ್ಯಗಳನ್ನು ಬಳಸಿಕೊಳ್ಳಿ ಈ ಕಾಲೇಜಿನಲ್ಲಿ, ಭಾರತದ ಯಾವುದೇ ಪ್ರಮುಖ ಕಾಲೇಜಿಗೆ ಹೋಲಿಸಿದರೆ ನೀವು ಉತ್ತಮ ವಾತಾವರಣವನ್ನು ಹೊಂದಿದ್ದೀರಿ. ಕೇಳಲು, ಹೊಸ ವಿಷಯಗಳನ್ನು ವೀಕ್ಷಿಸಲು, ಕುತೂಹಲವನ್ನು ಹೊಂದಿರಿ, ನಿಮಗೆ ಇತಿಹಾಸ ತಿಳಿದಿದ್ದರೆ, ನೀವು ಇತಿಹಾಸವನ್ನು ರಚಿಸಬಹುದು ಎಂದು ಹೇಳಿದರು.

ಕಾಲೇಜಿನ ಅಧ್ಯಕ್ಷರು, ಜಾನೆ ಕುಂಟೆ ಬಸವರಾಜ್, ಅವರ ಮಾತನಾಡಿ ವಿ ವಿ ಸಂಘ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು, ಅದು ಈ ಕಾಲೇಜಿನಲ್ಲಿರಲಿ ಅಥವಾ ನಮ್ಮ ವಿ ವಿ ಸಂಘದ ಯಾವುದೇ ಕಾಲೇಜಿನಲ್ಲಿರಲಿ,

ವಿದ್ಯಾರ್ಥಿಗಳ ಜೀವನವನ್ನು ರೂಪಿಸಲು ಬದ್ಧವಾಗಿದೆ,

ಸಂಘವು ಹಣ ಸಂಪಾದಿಸುವ ಉದ್ದೇಶವಿಲ್ಲ. ನಾವು ಕೈಗೆಟುಕುವ ಬೆಲೆಯಲ್ಲಿ ಅತ್ಯುತ್ತಮ ಶಿಕ್ಷಣವನ್ನು ನೀಡುತ್ತಿದ್ದೇವೆ ನಾನು ಇದರ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬ, ಸಂಸ್ಥೆ, ನನ್ನ ಎರಡನೇ ಬ್ಯಾಚ್‌ನಲ್ಲಿ ಎಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ್ದೇನೆ. ನನ್ನ ಮಕ್ಕಳೂ ಈ ಸಂಸ್ಥೆಯಲ್ಲಿ ಓದಿದ್ದು ಉತ್ತಮ ಸ್ಥಾನದಲ್ಲಿದ್ದಾರೆ. ನೀವು ಪಡೆಯಬೇಕಾದದ್ದು ಉತ್ತಮ ಎಂಜಿನಿಯರಿಂಗ್ ಜ್ಞಾನ ಮತ್ತು ಕೌಶಲ್ಯಗಳು ನೀವು ಪ್ರಯತ್ನಗಳನ್ನು ಮಾಡಿದರೆ ಮಾತ್ರ ನೀವು ಎಂಜಿನಿಯರಿಂಗ್ ಶಿಕ್ಷಣವನ್ನು ಹೊಂದಿದ್ದೀರಿ ಮತ್ತು ಯಶಸ್ವಿಯಾಗುತ್ತೀರಿ ತಿಳಿ ಹೇಳಿ ವಿಶ್ವವಿದ್ಯಾನಿಲಯ ಪರೀಕ್ಷೆಗಳಲ್ಲಿ 100 ಅಂಕಗಳಿಗೆ 100 ಅಂಕಗಳನ್ನು ಗಳಿಸುವ ಗುರಿ ಇರಿಸಿಕೊಳ್ಳಿ. ನಮ್ಮ ಶಿಕ್ಷಕರು ಯಾವುದೇ ಸಮಯದಲ್ಲಿ ಸಹಾಯ ಮಾಡಲು ಸಿದ್ಧರಾಗಿದ್ದಾರೆ ಎಂದು ತಿಳಿಸಿದರು.

ಆರಂಭದಲ್ಲಿ ಪ್ರಾಂಶುಪಾಲರಾದ ಡಾ॥ ಟಿ. ಹನುಮಂತರೆಡ್ಡಿ ಸ್ವಾಗತಿಸಿದರು, ಮೊದಲನೆಯವರ್ಷ ವಿದ್ಯಾರ್ಥಿ ವೃಂದರ ಸಂಯೋಜಕರು ಡಾ ಚೆನ್ನಾ.ವಿ.ಗೌಡರು, ಸ್ಟೂಡೆಂಟ್ ಇಂಡಕ್ಷನ್ ಪ್ರೋಗ್ರಾಮ್‌ನ ಬಗ್ಗೆ ವಿವರಿಸಿದರು. ಶ್ರೀಮತಿ ವಾಣಿ ಹಿರೇಗೌಡರು ಕಾರ್ಯಕ್ರಮ ನಿರೂಪಿಸಿದರು.

ಉಪಪ್ರಾಂಶುಪಾಲ ಡಾ. ಶ್ರೀಮತಿ ಸವಿತಾ ಸೊನೋಳಿ ಅವರು ಈ ಸಂಸ್ಥೆಯಲ್ಲಿ ಲಭ್ಯವಿರುವ ಸೌಲಭ್ಯಗಳು, ವಿದ್ಯಾರ್ಥಿಗಳು ಮಾಡಿದ ಸಾಧನೆಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದರು, ಹಿಂದಿನ ವರ್ಷಗಳಲ್ಲಿ ಪಡೆದ ಎಲ್ಲಾ ಗ್ರೇಡ್‌ಗಳು ಏನೇನು, ಕರ್ನಾಟಕ ರಾಜ್ಯದಲ್ಲಿ ಈ ಸಂಸ್ಥೆ ಎಷ್ಟು ಉತ್ತಮವಾಗಿದೆ ಇತ್ಯಾದಿ ಎಲ್ಲವನ್ನೂ ವಿದ್ಯಾರ್ಥಿಗಳ ಮುಂದೆ ಸಂಕ್ಷಿಪ್ತವಾಗಿ ವರದಿ ಮಾಡಿದರು.ಡಾ ಬಿ.ಸುಮಂಗಳ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಸಹಾಕಾರ್ಯದರ್ಶಿ ಶ್ರೀ ಯಾಲಿ ಮೇಟಿ ಪಂಪನಗೌಡ, ಡೀನ್ ಅಕಾಡಮಿಕ ಡಾ.ಹೆಚ್.ಗಿರೀಶ್,ಡೀನ್-ಪರೀಕ್ಷಾ ಬಿ.ಶ್ರೀಪತಿ, ಇಂಜಿನೀರಿಂಗ್ ವಿಭಾಗಗಳ ಮುಖ್ಯಸ್ಥರು ಡಾ.ಹೆಚ್.ಎಂ.ಮಲ್ಲಿಕಾರ್ಜುನ, ಡಾ.ಕೋರಿ

ನಾಗರಾಜ, ಡಾ.ಚಿತ್ರಿಕಿತೋಟಪ್ಪ, ಡಾ.ಕೊಟ್ರೇಶ್.ಎಸ್, ಡಾ.ಪ್ರಭಾವತಿ, ಡಾ.ಕೆ. ರಾಘವೇಂದ್ರ ಪ್ರಸಾದ್, ಡಾ.ಕೊಟ್ಟೂರೇಶ್ವರ ಎನ್.ಎಂ, ಡಾ.ನಾಗಭೂಷಣ.ಎನ್. ಎಂ, ಡಾ.ನಾಗರಾಜ್, ಮೊದಲನೆಯ ವರ್ಷ ವಿದ್ಯಾರ್ಥಿವೃಂದರ ಸಂಯೋಜಕರು ಡಾ.ಚಿನ್ನಾ.ವಿ.ಗೌಡರು, ಡಾ.ಪುನೀತ್‌ಜಿ.ಜೆ, ಮಹಾವಿದ್ಯಾಲಯದ ಶಿಕ್ಷಕವೃಂದದವರು, ಸಿಬ್ಬಂದಿವರ್ಗದವರು ವಿದ್ಯಾರ್ಥಿವೃಂದದವರು, ಪೋಷಕರು ಭಾಗವಹಿಸಿದ್ದರು.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com